ಇವರಿಗೂ ಆಗಿದೆ. ಇಷ್ಟು ಹೇಳುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. CHAIRMAN.—The House will rise and meet after half an hour.

The House rose at Four of the Clock to re-assemble at Thirty Minutes past Four of the Clock.

The House re-assembled at Thirty Minutes past Four of the Clock.

[MR. DEPUTY CHAIRMAN in the Chair]

BUDGET ESTIMATES FOR 1968-69-

(General Discussion)

(Debate Continued)

† ಶ್ರೀ ಕೆ. ನುಬ್ಬರಾವ್ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣ ಪ್ರಾರಂಭವಾದಾಗಿನಿಂದ ಇದುವರೆಗೆ ಒಂದೇ ಸಮನಾಗಿ ದೇಶದಲ್ಲಿ ಪ್ರಗತಿ ಪರವಾದಂಥ ಮತ್ತು ಆಗಬೇಕಾದಂಥ ಕೆಲಸಕಾರ್ಯಗಳ ಬಗ್ಗೆ ಧೀರ್ಘವಾದಂಥ ಚರ್ಚೆಗಳು ಈ ಮನೆಯಲ್ಲಿ ನಡೆದಿವೆ. ಅಲ್ಲದೆ ಆಯವ್ಯಯ ಭಾಷಣದ ಬಗ್ಗೆ ಧೀರ್ಘವಾದಂಥ ಭಾಷಣಗಳಾಗಿವೆ. ಒಂದು ವೇಳೆ ನಾನು ಮಾತನಾಡುವಾಗ ಪುನರಾವರ್ತನೆಯಾಗಬಹುದು. ಹತ್ತಾರು ಜನ ಮಾನ್ಯ ಸದಸ್ಯರುಗಳು ಮಾತನಾಡಿದಮೇಲೆ ಹೊಸಬರು ಮಾತನಾಡುವುದಕ್ಕೆ ಅಡ್ಡಿಅಡಚಣೆಗಳಾಗುವುದು ಸ್ವಾಭಾವಿಕ. ಇತರರು ಹೇಳದೇ ಇರತಕ್ಕಂಥ ವಿಚಾರಗಳನ್ನು ನಾನು ಹೇಳಬೇಕಾಗುತ್ತದೆ. ಅದ್ದರಿಂದ ಹೊಸ ವಿಷಯಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ.

ಮುಖ್ಯವಾಗಿ ನಮ್ಮ ದೇಶದ ಪ್ರಗತಿಗೆ ಅತ್ಯಾವಶ್ಯಕವಾಗಿ ಆಗಬೇಕಾದಂಥ, ಪ್ರಾಮುಖ್ಯವಾಗಿ ಆಗಬೇಕಾದಂಥ ಕೆಲಸಕಾರ್ಯಗಳಲ್ಲಿ ವಿದ್ಯೆಗೆ ಅಗ್ರಮಾನ್ಯಸ್ಥಾನವಾಗಿ ಕೊಡಬೇಕಾಗಿದೆ. ಎರಡನೆಯ ಸ್ಥಾನವೆಂದರೆ ಆರ್ಥಿಕ ಪರಿಸ್ಥಿತಿ. ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಲಭ್ಯವನ್ನು ಕೊಡಬಹುದೆಂದು ಹೇಳಬಹುದು. ಅಥವಾ ಜನರಿಗೆ ತಿಳಿವಳಿಕೆ ಚೆನ್ನಾಗಿ ಬಂದು ತಮ್ಮ ಕೆಲಸ ಕಾರ್ಯಗಳನ್ನು ಚೆನ್ನಾಗಿ ಮಾಡಿ ಹೆಚ್ಚು ಸಂಪಾದನೆಯನ್ನು ಮಾಡಿದರೆ ಆರ್ಥಿಕ ಪ್ರಗತಿ ತನ್ನಷ್ಟಕ್ಕೆ ತಾನೇ ಜಾಸ್ತಿಯಾಗುತ್ತದೆಂದು ಹೇಳಬಹುದು. ಈ ದೃಷ್ಟಿಯಿಂದ ಮೊದಲಿಗೆ ನಾನು ವಿದ್ಯಾಭ್ಯಾಸದ ವಿಷಯವಾಗಿ ಕೆಲವು ಸಲಹೆಗಳನ್ನು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಶಂಕರಗೌಡರ ಅವಗಾಹನೆಗೆ ತರುವುದಕ್ಕೆ ಬಯಸುತ್ತೇನೆ. ವಿದ್ಯಾಭ್ಯಾಸಕ್ಕೋಸ್ಕರ ಹೇರಳವಾದಂಥ ಹಣವನ್ನು ನಮ್ಮ ಸರ್ಕಾರದವರು ಖರ್ಚುಮಾಡುತ್ತಿದ್ದಾರೆ ಎನ್ನುವ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅದೇ ರೀತಿ ವಿದ್ಯಾಭ್ಯಾಸಕ್ಕೆ ಸರ್ಕಾರದವರು ಒದಗಿಸಿರುವ ಸೌಕರ್ಯಗಳನ್ನು ಮತ್ತು ಅನುಕೂಲಗಳನ್ನು ಕಂಡಿನ ಹತ್ತು ವರ್ಷಗಳಿಗೆ ಹೋಲಿಸಿ ನೋಡಿದರೆ ಹಲವು ಪಟ್ಟು ಶಾಲೆಗಳು ಜಾಸ್ತಿಯಾಗಿವೆ. ಎಲ್ಲಾ ಕಡೆಗಳಲ್ಲೂ ಪ್ರಾಥಮಿಕ ಮಾಧ್ಯಮಿಕ ಶಾಲೆಗಳು ವಿಪರೀತವಾಗಿ ಹೆಚ್ಚಿವೆ. ಈ ವಿಚಾರದಲ್ಲಿ ನಿಜಕ್ಕೂ ನಮ್ಮ ವಿದ್ಯಾ ಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಗಳು ನನ್ನ ಅಭಿನಂದನೆಗೆ ಪಾತ್ರರಾಗುತ್ತಾರೆ. ವಿದ್ಯಾಭ್ಯಾಸದ ಒಂದು ವಿಸ್ತೀರ್ಣ ಮತ್ತು ಪ್ರಗತಿಯನ್ನು ತೆಗೆದುಕೊಳ್ಳುವ ಪಕ್ಷಕ್ಕೆ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಕೇವಲ ಸ್ಕೂರ್‌ಗಳ ಸಂಖ್ಯೆ ಜಾಸ್ತಿಯಾಗಿದೆಯೆಂದು ನಾವು ತೃಪ್ತಿಪಟ್ಟುಕೊಂಡರೆ ಫಲವಿಲ್ಲ, ಈ ಬಗ್ಗೆ ಒಂದು ಗಾಧೆ ಹೇಳಬೇಕೆಂದರೆ, ತೋಟ ಶೃಂಗಾರ ಒಳಗೆ ನೋಡಿದರೆ ಸೊಪ್ಪು ಎಂಬಂತಾಗಿದೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಗುಣದ ಬಗ್ಗೆ ಎಷ್ಟು ಪ್ರಗತಿಯಾಗಿತ್ತೋ ಅಷ್ಟೊಂದು ಆಗುತ್ತಿಲ್ಲವೆಂದು ಮಾನ್ಯ ವಿದ್ಯಾ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಬಗ್ಗೆ ತೀವ್ರವಾದಂಥ ಸುಧಾರಣೆಗಳನ್ನು ಮಾನ್ಯ ವಿದ್ಯಾ ಮಂತ್ರಿಗಳು ತರಬೇಕಾಗಿದೆ. ಇಲ್ಲದಿದ್ದರೆ ವಿದ್ಯಾಭ್ಯಾಸಕ್ಕಾಗಿ ಇಷ್ಟೊಂದು

(ಶ್ರೀ ಕೆ. ಸುಬ್ಬರಾವ್)

ಹಣವನ್ನು ಖರ್ಚುಮಾಡುವುದು ನಿಜಕ್ಕೂ ಸಾರ್ಥಕವಾಗುವುದಿಲ್ಲ. ಈ ಬಗ್ಗೆ ಒಂದೇ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಒದುತ್ತಿರುವ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಏನು ಒಂದು ಒಳ್ಳೆಯದಾಗಲೀ ಅಥವಾ ಕೆಟ್ಟದ್ದಾಗಲೀ ಒತ್ತಲ್ಪಡುತ್ತದೋ ಅದೇ ಮುಂದೆ ಅವರ ಜೀವನದಲ್ಲಿ ಮುಂದುವರೆಯುತ್ತದೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಮಕ್ಕಳ ಚಿಕ್ಕ ವಯಸ್ಸಿನಲ್ಲಿ ಅವರ ಮನಸ್ಸಿನ ಮೇಲೆ ಒಳ್ಳೆಯ ವಿಚಾರಗಳನ್ನು ಮೇಣದಂತೆ ಮುದ್ರೆ ಒತ್ತಬಹುದು. ಇದಕ್ಕೆ ಒಂದು ನಿದರ್ಶನ ಹೇಳಬಯಸುತ್ತೇನೆ: ಮಹಾತ್ಮ ಗಾಂಧಿಯವರು ತಮ್ಮ ಆತ್ಮ ಚರಿತ್ರೆಯಲ್ಲಿ ಈ ರೀತಿ ಬರೆದಿದ್ದಾರೆ; ನಾನು ಚಿಕ್ಕ ಹುಡುಗನಾಗಿದ್ದಾಗ ಹರಿಶ್ಚಂದ್ರ ನಾಟಕವನ್ನು ನೋಡಲು ಹೋಗಿದ್ದೆ, ಆ ನಾಟಕದಲ್ಲಿ ಹರಿಶ್ಚಂದ್ರನು ಸತ್ಯ ಕ್ಕೋಸ್ಕರವಾಗಿ ಏನು ಕಷ್ಟಪಟ್ಟ ಎಂಬ ಬಗ್ಗೆ ನನ್ನ ಮನಸ್ಸಿನ ಮೇಲೆ ಅಚ್ಚಳಿಯದೆ ಉಳಿದಿದೆ. ಮುಂದೆ ನಾನು ದೊಡ್ಡವನಾದ ಮೇಲೂ ಸಹ ಸತ್ಯಕ್ಕೋಸ್ಕರ ಬಹಳ ಹೊಡೆದಾಡಿದೆ, ಈ ಹರಿಶ್ಚಂದ್ರ ನಾಟಕ ನೋಡಿದ್ದರಿಂದ ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮ ಉಂಟಾಯಿತೆಂದು ಹೇಳಿದ್ದಾರೆ. ಮುಂದೆ ಇನ್ನೊಂದು ಉದಾಹರಣೆಯನ್ನು ಕೊಡುತ್ತಾರೆ: ನಾನು ಶ್ರವಣನ ಪಿತೃಭಕ್ತಿ ನಾಟಕವನ್ನು ನೋಡಿದೆ. ಆ ನಾಟಕದಲ್ಲಿ ಶ್ರವಣನು ತನ್ನ ತಂದೆ ತಾಯಿಗಳ ಸೇವೆಯನ್ನು ಯಾವ ರೀತಿ ಮಾಡಿದ ಎಂಬ ಬಗ್ಗೆ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ ಎಂದು ಹೇಳಿದ್ದಾರೆ. ಇದರ ಅರ್ಥವೇನೆಂದರೆ, ಚಿಕ್ಕ ವಯಸ್ಸಿನಲ್ಲಿ ಮಕ್ಕಳ ಮೇಲೆ ಯಾವ ವಿಧಾನದ ಶಿಕ್ಷಣವಿರುತ್ತದೋ ಅದೇ ಮುಂದೆ ಎಂದೆಂದಿಗೂ ಪ್ರಯೋಜನಕಾರಿಯಾಗುತ್ತದೆ, ಇಲ್ಲವೆ ವಿನಾಶಕಾರಿಯಾಗುತ್ತದೆಂದು ಹೇಳಬಹುದು. ಈಗ ಒಂದು ವಿಷಯಗಳನ್ನು ತೆಗೆದುಕೊಳ್ಳೋಣ, ಈಗ ಪ್ರತಿಯೊಂದು ಹಳ್ಳಿ ಹಳ್ಳಿಗೂ ಪ್ರಾಥಮಿಕ ಶಾಲೆಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಈ ಶಾಲೆಗಳಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರುಗಳು ಮಕ್ಕಳಿಗೆ ಕೊಡುತ್ತಿರುವ ವಿದ್ಯಾಭ್ಯಾಸದ ಕ್ರಮದಲ್ಲಿ ಬಹಳ ದೋಷಗಳಿವೆ ಎನ್ನುವುದನ್ನು ನಾನು ನಮ್ರತೆಯಿಂದ ಮಾನ್ಯ ವಿದ್ಯಾಮಂತ್ರಿಗಳಿಗೆ ತಿಳಿಸುತ್ತೇನೆ. ಅನೇಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳು ಮಕ್ಕಳಿಗೆ ಒಳ್ಳೆಯ ಅಭಿಮಾನದಿಂದ ಪಾಠವನ್ನು ಹೇಳುವುದು ಕಡಿಮೆಯಾಗಿದೆ. ಎಲ್ಲೋ ವಾಸ ಮಾಡುತ್ತಿರುತ್ತಾರೆ, ಯಾವಾಗಲೋ ಬಂದು ಸ್ಕೂಲ್‌ಗಳನ್ನು ತೆಗೆದು ಪಾಠ ಹೇಳುತ್ತಿದ್ದಾರೆ. ಕೆಲವು ಸಲ ಸ್ಕೂಲಿನ ಕದ ತೆಗೆಯುತ್ತಾರೋ ಇಲ್ಲವೋ ಎಂಬುದು ಸಹ ತಿಳಿಯುವುದಿಲ್ಲ. ಬೇರೆ ಕಡೆ ಕೆಲಸ ಸಿಗದವರು ಈ ಕೆಲಸಕ್ಕೆ ಬರುವುದು ಮತ್ತು ಡಿಗ್ರಿ ಕೋರ್ಸಿನಲ್ಲಿ ಒಂದು ಪಾರ್ಟ್ ಹೋಗಿದ್ದರೆ ಅದನ್ನು ಮಾಡಿ ಕೊಳ್ಳುವವರೆಗೆ ಇರಲಿ ಎಂದು ಉಪಾಧ್ಯಾಯರ ಕೆಲಸಕ್ಕೆ ಬರುವುದು, ಮತ್ತೆ ಬೇರೆ ಕಡೆ ಒಳ್ಳೆಯ ಕೆಲಸ ಸಿಕ್ಕಿದಾಗ ಇದನ್ನು ಬಿಟ್ಟು ಹೋಗುವುದು, ಈ ಕಾರಣಗಳಿಂದ ಅಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳು ಮಕ್ಕಳಿಗೆ ಸರಿಯಾಗಿ ಪಾಠ ಮಾಡುತ್ತಿಲ್ಲವೆಂದು ಹೇಳಬಹುದು. ಯಾವ ಇರಾಖೆಯಲ್ಲೂ ಕೆಲಸ ಸಿಕ್ಕದಿದ್ದಾಗ ವಿದ್ಯಾಭ್ಯಾಸದ ಇರಾಖೆಗೆ ಬಂದು ಸೇರುತ್ತಾರೆ; ಬೇಡವಾದಾಗ ಬಿಟ್ಟು ಹೋಗುತ್ತಾರೆ. ಬೇರೆ ದಾರಿ ಹುಡುಕುವವರೆಗೆ ಈ ಕೆಲಸದಲ್ಲಿ ಇರುತ್ತಾರೆ. ಇದರ ಪರಿಣಾಮ ವೇನಾಗುತ್ತದೆಂದರೆ ಈ ರೀತಿ ಬಂದು ಸೇರುವವರಿಗೆ ಮಕ್ಕಳಿಗೆ ಪಾಠ ಹೇಳುವ ವಿಚಾರದಲ್ಲಿ ಆಸಕ್ತಿಯಿರುವುದಿಲ್ಲ, ಶ್ರದ್ಧೆಯಿರುವುದಿಲ್ಲ. ಈ ವಿಚಾರದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದು ಅಂಶವನ್ನು ಪ್ರಸ್ತಾಪ ಮಾಡಿದ್ದಾರೆ. ಏನೆಂದರೆ ಉಪಾಧ್ಯಾಯರಾಗಿ ಬರತಕ್ಕಂಥವರಿಗೆ ಎರಡು ವರ್ಷವಾದರೂ ಶಿಕ್ಷಣ ಕೊಡಬೇಕು, ಆ ರೀತಿ ಶಿಕ್ಷಣ ಕೊಟ್ಟನಂತರ ಅವರು ಪ್ರಾಥಮಿಕ ಶಾಲೆಯ ಉಪಾಧ್ಯಾಯರಾಗಲು ಅರ್ಹರಾಗುತ್ತಾರೆಂದು. ಇದು ಒಳ್ಳೆಯ ಸಂತೋಷ ವಿಚಾರ. ಎರಡು ವರ್ಷ ಶಿಕ್ಷಣ ಪಡೆದ ಮೇಲೆ ತಾನು ಉಪಾಧ್ಯಾಯನಾಗಿ ಕೆಲಸಮಾಡಬೇಕೆಂಬ ಆಸಕ್ತಿ ಆತನಲ್ಲಿ ಬರುತ್ತದೆ. ಎರಡನೆಯದು—ಇನ್ನು ಅನೇಕ ಕಡೆಗಳಲ್ಲಿ ಶಾಲೆಗಳಲ್ಲರತಕ್ಕ ಕೊರತೆ ಏನೆಂದರೆ ಮಕ್ಕಳಿಗೆ ಸರಿಯಾಗಿ ಸಕಾಲದಲ್ಲಿ, ಶಿಸ್ತಿನಿಂದ, ಮತ್ತು ಕಾಲಕ್ಕೆ ಸರಿಯಾಗಿ ಅಭ್ಯಾಸಮಾಡುವ ಮಾರ್ಗವಿಲ್ಲ. ಇದರಲ್ಲಿ ಬಹಳ ಸುಧಾರಣೆಯಾದರೆ, ನಮ್ಮ ಪ್ರಮುಖವಾದ ವಿದ್ಯಾಭ್ಯಾಸಕ್ಕೆ ಬಹಳ ಅನುಕೂಲವಾಗುತ್ತದೆ. ಇನ್ನು ಮಾಧ್ಯಮಿಕ ಮತ್ತು ಹೈಸ್ಕೂಲು ತರಗತಿಗಳಲ್ಲರತಕ್ಕ ಪ್ರಾಮುಖ್ಯವಾದಂತಹ ದೋಷಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗ ಕೆಲವು ಶಾಲೆಗಳಲ್ಲಿ ನೂರಕ್ಕೆ ನೂರು ಜನ ತೇರ್ಗಡೆಯಾಗಲಿಲ್ಲ ಎನ್ನತಕ್ಕಂತಹ ಉದಾಹರಣೆಗಳು ಸಿಗುತ್ತದೆ. ಉದಾಹರಣೆಗೆ ನನ್ನಲ್ಲಿ ಒಬ್ಬ ವಿದ್ಯಾರ್ಥಿ ಬಂದ. ಆಗ ನಾನು ಹೈಸ್ಕೂಲಿನಲ್ಲಿ ಫ್ರೀಶಿಪ್ ಸಮಿತಿಗೆ ಸದಸ್ಯನಾಗಿದ್ದೆ. ನಾನು ಹೆಡ್‌ಮಾಸ್ಟರವರಿಗೆ ಹೇಳಿಕೊಂಡೆ. 'ಸ್ವಾಮಿ ಬಡವ, ಏನಾದರೂ ಸಹಾಯ ಮಾಡಿ ಎಂದು. ಆದರೆ ಆ ಹೆಡ್‌ಮಾಸ್ಟರ್ ಹೇಳಿದರು 'ಅವನು ಹೊಚ್ಚೆಗೆ ಬಡವನಾಗಿರಬಹುದು, ಆದರೆ ಅವನ ಸ್ಟಾಂಡರ್ಡ್ ಏನಿದೆ ಎಂಬುದನ್ನು ನೋಡಿ. ನಿಜವಾಗಿ ಮೊದಲನೆಯ

ತರಗತಿಯಷ್ಟೂ ಒಬ್ಬನ ಸ್ಟ್ಯಾಂಡರ್ಡ್ ಇಲ್ಲ. ನಾನು ಆ ಹುಡುಗನನ್ನು ಏನಪ್ಪಾ ಹೀಗೆ ಹೇಳುತ್ತಾರೆ ಎಂದು ಕೇಳಿದರೆ, ನನಗೆ ಏನೂ ಗೊತ್ತಿಲ್ಲ ಸಾರ್, ನನ್ನ ತಂದೆಯವರು ಹೆಡ್‌ಮಾಸ್ಟರಿಗೆ ಏನೋ ಕೊಟ್ಟು ಬಿಟ್ಟು ಒಂದು ಸರ್ಟಿಫಿಕೇಟ್ ಕೊಟ್ಟು ಬಿಟ್ಟರು ಎಂದು ಹೇಳಿದ. ಈ ರೀತಿ ತಾವು ಮಾಡತಕ್ಕ ಕರ್ತವ್ಯವನ್ನು ಎಷ್ಟು ಮಟ್ಟಿಗೆ ಮಾಡುತ್ತಾರೆ, ಅದರಿಂದ ಮಕ್ಕಳಿಗೆ ಹಾಗೂ ಮುಂದಿನ ಭವಿಷ್ಯಕ್ಕೆ ಎಷ್ಟು ಅನ್ಯಾಯವಾಗುತ್ತದೆ ಎಂಬುದು ಅವರ ಮನಸ್ಸಿಗೆ ಬರದಿದ್ದುದು ದುರ್ದೈವದ ಸಂಗತಿ.

ಇನ್ನೊಂದು ವಿಷಯ. ಇವರು ಶಾಲೆಗಳಲ್ಲಿ ಪಾಠ ಹೇಳುತ್ತಾರೋ ಅಥವಾ ಮನೆಯಲ್ಲಿ ಪಾಠ ಹೇಳುತ್ತಿದ್ದಾರೋ ಎಂಬ ವಿಚಾರ. ಯಾವ ಹೈಸ್ಕೂಲು ಉಪಾಧ್ಯಾಯರಾದರೂ 30–40 ವಿದ್ಯಾರ್ಥಿಗಳಿಗೆ ಪಾಠವನ್ನು ಬೆಳಿಗ್ಯೆಯಿಂದ ಸಾಯಂಕಾಲದವರೆಗೂ ಹೇಳುತ್ತಿದ್ದಾರೆ. ಈ ರೀತಿ ಪಾಠ ಹೇಳುವಾಗ ಅವರಿಗೆ ಶಾಲೆಗಳಿಗೆ ಬಂದು ಪಾಠ ಹೇಳುವುದಕ್ಕೆ ಶಕ್ತಿಯಾದರೂ ಎಲ್ಲಿರುತ್ತದೆ? ಮತ್ತು ಇದರಿಂದ ಏನಾಗಿದೆ ಎಂದರೆ ಉಪಾಧ್ಯಾಯರೊಳಗೆ ವೈರತ್ವ ಉಂಟಾಗಿದೆ. ನನ್ನ ಹತ್ತಿರ ಅವನು ಪಾಠಕ್ಕೆ ಬರುವುದಿಲ್ಲ, ಅವನನ್ನು ಪಾಸ್ ಮಾಡಿಸಬಾರದು, ಮತ್ತು ಇನ್ನೊಬ್ಬ ಅವನು ನನ್ನ ಹತ್ತಿರಕ್ಕೆ ಪಾಠಕ್ಕೆ ಬರುತ್ತಾನೆ, ಅವನನ್ನು ಏನಾದರೂ ಮಾಡಿ ಪಾಸ್ ಮಾಡಿಸಿ ಬೇಕು ಎಂಬ ಅಭಿಪ್ರಾಯಗಳು ಬಂದು ಪಂಗಡಗಳು ಉಂಟಾಗುತ್ತವೆ. ಈ ರೀತಿ ಗಂಡ ಹೆಂಡಿರ ಜಗಳದಲ್ಲಿ ಕೂನು ಬಡವಾಯ್ತು ಎಂಬ ಗಾದೆಯ ಹಾಗೆ, ಇವರ ಭೇದಭಾವಗಳಿಂದ ಮಕ್ಕಳ ಭವಿಷ್ಯವೇ ಹಾಳಾಗುತ್ತದೆ. ಇರಾಖೆಯ ಅಪ್ಪಣೆ ಪಡೆದು ಎರಡು ವಿದ್ಯಾರ್ಥಿಗಳಿಗೆ ಮಾತ್ರ ಪಾಠ ಹೇಳುವುದಕ್ಕೆ ಅನುಮತಿ ಕೊಡಬಹುದು ಎಂದು ಇದೆ. ಇಂದು ಅವರು ಇಬ್ಬರಲ್ಲ 20 ಜನಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಇರುವ ನಿಯಮವನ್ನು ಬಹಳ ಕಠಿಣವಾದ ರೀತಿಯಲ್ಲಿ ಜಾರಿ ಮಾಡಬೇಕು. ಈ ರೀತಿ ಮಾಡದಿದ್ದರೆ ಮಕ್ಕಳ ಪರಿಸ್ಥಿತಿಯು ಏನಾಗುತ್ತದೆಂಬುದನ್ನು ನಾವು ಮನಗಾಣಬೇಕು. ಹಳ್ಳಿಯ ಬಾಲಕರಿಗೆ ಸಿಗುವಂತಹ ಶಿಕ್ಷಣ ಸರಿಯಾಗಿ ದೊರೆಯದಿದ್ದರೆ, ಆ ಬಾಲಕರು ಮುಂದಕ್ಕೆ ಬರುವುದು ಬಹಳ ಕಷ್ಟವಾಗುತ್ತದೆ. ಪ್ರಥಮ ದರ್ಜೆಯಿಂದ ಸರಿಯಾದ ಶಿಕ್ಷಣ ಸಿಗದಿದ್ದರೆ, ಅವರ ಮನೆಯಲ್ಲ ತಂದೆತಾಯಂದಿರೂ ಅವಿದ್ಯಾವಂತರಾಗಿರುವುದರಿಂದ, ಮನೆಯಲ್ಲೂ ಶಿಕ್ಷಣ ಸಿಗುವುದು ಕಡಿಮೆ. ಏನಿದ್ದರೂ ಅವರು ಉಪಾಧ್ಯಾಯರನ್ನೇ ಅವಲಂಬಿ ಮಾಡಬೇಕಾಗುತ್ತದೆ. ಉಪಾಧ್ಯಾಯರು ಏನು ಬೋರ್ಡಿನಲ್ಲಿ ಬರೆಯುತ್ತಾರೋ, ಅದನ್ನೇ ಅವರು ತಿಳಿದುಕೊಂಡಿರಬೇಕಾಗುತ್ತದೆ. ಈ ರೀತಿಯಿಂದ ವಿದ್ಯಾಭ್ಯಾಸವಾದರೆ, ಅವುಗಳು ಮುಂದೆ ಬರುವಾಗ ಬಹಳ ಕಷ್ಟವಾಗುತ್ತದೆ. ಅದರಿಂದಾಗಿ ಕೊನೆಗೆ 100ಕ್ಕೆ 100 ಜನರೂ ಅನುತ್ತೀರ್ಣರಾಗುವ ಸಂದರ್ಭವಿರುತ್ತದೆ.

4–45 P.M.

ಇವತ್ತು ಉಪಾಧ್ಯಾಯರುಗಳಿಗೆ ಕೊಡತಕ್ಕ ಸಂಬಳ ಎಲ್ಲವನ್ನೂ ತೆಗೆದುಕೊಂಡರೆ ಸಾಧಾರಣ 3½ ಕೋಟಿ ರೂಪಾಯಿಗಳಾಗುತ್ತದೆ. ಇಷ್ಟು ಹಣವನ್ನು ನಾವು ಖರ್ಚು ಮಾಡುತ್ತಿರುವಾಗ ಅದಕ್ಕೆ ಸರಿಯಾಗಿ ಪ್ರತಿಫಲ ಬರದಿದ್ದರೆ, ಅದರಿಂದ ಪ್ರಯೋಜನ ಏನು? ಇದರ ಜೊತೆಯಲ್ಲಿ ಮತ್ತೊಂದು ದೋಷವಿದೆ. ಕೆಲವು ಶಾಲೆಗಳಲ್ಲಿ ಈ ಉಪಾಧ್ಯಾಯರುಗಳು ಹತ್ತಾರು ವರ್ಷ ಅಲ್ಲೇ ಇದ್ದು ಊರಿನ ರಾಜಕೀಯದಲ್ಲಿ ಪ್ರವೇಶ ಮಾಡುತ್ತಾರೆ. ಅವರಿಗೆ ಬೇರೆ ಏನು ಕೆಲಸವೂ ಇಲ್ಲ. ದೇಶದ ರಾಜಕೀಯದಲ್ಲಿ ಅರ್ಜಿ ಬರೆಯುವುದಕ್ಕೆ ಕೈಹಾಕುತ್ತಾರೆ. ಇದರಿಂದ ಊರಿನಲ್ಲೂ ಕೂಡ ಒಂದು ವೈಶಮ್ಯ ಉಂಟಾಗುವ ಪರಿಸ್ಥಿತಿ ಉಂಟಾಗುತ್ತದೆ. ಗುರುವು ಹಾಗೆ ಇದ್ದರೆ, ಇವರ ಹತ್ತಿರ ಕಲಯುತ್ತಿರುವ ಮಕ್ಕಳು ಕೂಡ ಗುರುವಿನಂತೆ ಶಿಷ್ಯರು ಎನ್ನುವಂತೆ ಮಕ್ಕಳೂ ಆ ರೀತಿ ಅಭ್ಯಾಸ ಮಾಡುವುದಕ್ಕೆ ಶುರು ಮಾಡುತ್ತಾರೆ. ಮಕ್ಕಳಲ್ಲಿಯೂ ಒಂದು ವೈಶಮ್ಯ ಬೆಳೆಯುವುದಕ್ಕೆ ನಾಂದಿಯಾಗುತ್ತದೆ. ಇವನ್ನೆಲ್ಲಾ ಮಾನ್ಯ ಮಂತ್ರಿಗಳು ಗಮನಿಸ ಬೇಕು. ಹಿಂದೆ ಯಾರು ಉಪಾಧ್ಯಾಯರಾಗಲಿ, ಒಂದು ಸ್ಥಳದಲ್ಲಿ 5 ವರ್ಷ ಇದ್ದಿದ್ದರೆ, ಅವರನ್ನು ಬೇರೆ ಸ್ಥಳಕ್ಕೆ ವರ್ಗಮಾಡಬಹುದು ಎಂಬ ನಿಯಮ ಇತ್ತು. ಈಗ ಆ ನಿಯಮ ಇದೆಯೋ ಇಲ್ಲವೊ ಎಂದು ಗೊತ್ತಿಲ್ಲ. ಇಲ್ಲದಿದ್ದರೆ ಅದನ್ನು ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿ ಕೊಳ್ಳುತ್ತೇನೆ. ಒಂದು ಊರಿಂದ ಇನ್ನೊಂದು ಊರಿಗೆ ಹೋದರೆ, ಏನೋ ನನ್ನ ಮೇಲೆ ಅರ್ಜಿ ಕಳಿಸುತ್ತಾರೆ, ನನ್ನ ಹುದ್ದೆಗೆ ತೊಂದರೆಯಾಗಬಹುದು ಎಂಬ ಒಂದು ಭಯವಿರುತ್ತದೆ; ಮತ್ತು ನಾವು ಮಾಡಿದ ಕೋಟ್ಯಾಂತರ ರೂಪಾಯಿಗಳಿಗೆ ಪ್ರತಿಫಲ ಬರುತ್ತದೆ. ಮೊನ್ನೆಯ ದಿನ ಒಂದು ಬಸ್ಸಿನಲ್ಲಿ ಹೇಳುತ್ತಿದ್ದರು, ಇಲ್ಲಿ ಬೇಕಾದಷ್ಟು ಖರ್ಚು ಮಾಡುತ್ತಿದ್ದಾರೆ, ಹೇಗೆಂದರೆ, ಒಂದು

(ಶ್ರೀ ಕೆ. ನುಚ್ಚಿರಾಪ್)

ಹನುಮನ್ನು ಚೆನ್ನಾಗಿ ಸಾಕಿ ಬಿಟ್ಟು ಕೊನೆಗೆ ಅದು ಬರಡು ಆದರೆ, ಹಾಲೇ ಕೊಡದಿದ್ದರೆ ಹೇಗೆ ಆಗುತ್ತದೋ ಹಾಗೆ ಆಗುತ್ತದೆ ಇಲ್ಲ ಎಂದು ಹೇಳುತ್ತಿದ್ದರು. ಈ ಆಯವ್ಯಯ ಅಂದಾಜಿಗೆ ನಮ್ಮ ಸಚಿವರನ್ನು ಅಭಿನಂದಿಸುವವರೂ ಇದ್ದಾರೆ, ಟೀಕೆ ಟಿಪ್ಪಣಿಗಳನ್ನು ಮಾಡುವವರೂ ಇದ್ದಾರೆ. ಆದರೆ ನಾನು ಬಯ್ಯುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ನಾನು ಏನಾದರೂ ಒಂದು ಸಲಹೆ ಕೊಟ್ಟರೂ ಅದನ್ನು ಖಂಡಿತವಾಗಿಯೂ ಕಾರ್ಯಗತ ಮಾಡತಕ್ಕ ಶಕ್ತಿ ಅವರಿಗೆ ಇದೆ, ಸಾಮರ್ಥ್ಯ ಇದೆ. ಮನಸ್ಸು ಇದೆ, ಹಾಗೂ ದಕ್ಷತೆ ಇದೆ, ಧೈರ್ಯ ಇದೆ. ಮಾನ್ಯ ಮಂತ್ರಿಯವರು ತನ್ನ ಅವಧಿಯೊಳಗೆ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿರತಕ್ಕ ದೋಷಗಳನ್ನು ನಿವಾರಣೆ ಮಾಡಿ ಮುಂದಿನ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಬರುವುದಾದರೆ, ನಿಜವಾಗಿಯೂ ದೇಶದ ಕೃತಜ್ಞತೆಗೆ ಮತ್ತು ಮುಂದಿನ ಜನಾಂಗದ ಕೃತಜ್ಞತೆಗೆ ಪಾತ್ರರಾಗುತ್ತಾರೆ ಎಂಬುದರಲ್ಲಿ ಏನೂ ಸಂಶಯವಿಲ್ಲ. ಮುಂದಕ್ಕೆ ಸರಿಯಾದ ಶಿಕ್ಷಣ ಬಾರದಿದ್ದರೆ, ಅದು ಮಕ್ಕಳಿಗೆ ತೊಂದರೆ ಯಾಗುತ್ತದೆ. ಹಿಂದೆ ಪಠ್ಯಪುಸ್ತಕಗಳಲ್ಲಿ ಕೂಡ ಅನೇಕ ನೀತಿಯುತವಾದ ಬುದ್ಧಿದಾಯಕವಾದ ಕತೆಗಳನ್ನು ಮತ್ತು ಮಹಾ ಪುರುಷರ ಚರಿತ್ರೆಗಳನ್ನು ಕೊಡುತ್ತಿದ್ದರು. ಹಾಗಿದ್ದರೆ ಆದರಿಂದ ಮಕ್ಕಳು ತಮ್ಮ ಭವಿಷ್ಯವನ್ನು ಯಾವುದೋ ಒಬ್ಬ ಮಹಾ ಪುರುಷನನ್ನು ಆಧಾರ ವಾಗಿಟ್ಟುಕೊಂಡು ಮುಂದಿನ ಜೀವನವನ್ನು ರೂಪಿಸಿಕೊಳ್ಳುತ್ತಾರೆ, ಅಂಥ ಒಂದು ಮನೋಭಾವ ಅವರಲ್ಲಿ ಉಂಟಾಗುತ್ತದೆ. ಇಲ್ಲದಿದ್ದರೆ ಯಾರೋ, ಏನೋ ಕೇಳಿದರು, ಎಂಬ ಒಂದು ಭಾವನೆ ಬರುತ್ತದೆ. ಇದರಿಂದರೇ ಮೊನ್ನೆ ಮೊನ್ನೆ ತ್ರಿಭಾಷಾ ಸೂತ್ರವಾದಂತಹ ಪದ್ಧತಿ ಯಿಂದ ಮಕ್ಕಳ ಮನಸ್ಸಿಗೆ ನೋವು ಉಂಟಾಗಲು ಕಾರಣವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಮೂರು ಭಾಷೆಗಳನ್ನು ತೆಗೆದುಕೊಳ್ಳುವುದು ನಮ್ಮ ಹುಡುಗರಿಗೆ ಬಹಳ ಕಷ್ಟ, ಇದರಿಂದ ಎರಡು ಭಾಷೆಗಳೇ ಇದ್ದರೆ ಸಾಕು ಎನ್ನುವ ವಾದವನ್ನೂ ನಾವು ಕೇಳುತ್ತೇವೆ. ಬಹುಶಃ ನಮ್ಮ ಹುಡುಗರು ವಿದ್ಯೆಗಾಗಿ ಕಷ್ಟಪಡತಕ್ಕದ್ದು ಅವರ ಕರ್ತವ್ಯವಾಗಿದೆ. ವಿದ್ಯೆಗಾಗಿ ಯುವಕರು ನಿದ್ದೆ ಬಿಟ್ಟು ಹಗಲೂ ರಾತ್ರಿ ಕಷ್ಟಪಟ್ಟು ಓದಿ ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಇಂಥಹ ವಿವಾದಗಳನ್ನು ಮಾಡುವುದರಿಂದ ಯಾರಿಗೂ ಸುಖವೂ ಇಲ್ಲ. ಈಗ ಏನಾಗಿದೆ ಎಂದರೆ, ಎಲ್ಲರೂ ಅನುಕರಣ ಮಾಡುವ ಶಕ್ತಿ ಪಡೆದಿದ್ದಾರೆಯೇ ಹೊರತು ವಿವೇಚನೆ ಮಾಡುವ ಗೋಜಿಗೇ ಹೋಗುತ್ತಿಲ್ಲ. ಸಾಮಾನ್ಯವಾಗಿ ಯಾರಾದರೂ ದೆಹಲಿಯಿಂದ ಬರುವ ಅಧಿಕಾರಿಗಳನ್ನು ಇಲ್ಲಿಗೆ ಒಂದು ಸಾರಿ ಬಂದಾಗ ಕೇಳಿ ನೋಡಿ, ಅವರು ಏನು ಹೇಳುತಾರೆ; ಅವರ ಮಕ್ಕಳೆಲ್ಲಾ ಅಲ್ಲಿರುವ ಬಂಗಾಳಿಯನ್ನೋ ಇಲ್ಲವೇ ಹಿಂದಿಯನ್ನೋ ಬಹಳ ಸುಲಭವಾಗಿ ಕಲಿತುಕೊಂಡುಬಿಡುತ್ತಾರೆ. ಹುಡುಗರು ಆಟಪಾಟಗಳನ್ನಾಡುವಾಗ ತಮಿಳು ಇಲ್ಲವೇ ತೆಲುಗು ಹೀಗೆ ನಾನಾ ಭಾಷೆಗಳನ್ನ ಬಹಳ ಸುಭವಾಗಿ ಕಲಿಯುತ್ತಿರುತ್ತಾರೆ ಎಂದು ಹೇಳುತ್ತಾರೆ. ಮಕ್ಕಳಿಗೆ ಯಾವ ಭಾಷೆಯಾದರೂ ಅದರೊಂದಿಕೆ ಹೊಂದಾಣಿಕೆ ಮಾಡಿಕೊಳ್ಳುವ ಶಕ್ತಿ ಅವರಿಗಿದೆ. ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ನೀಡುವ ಶಕ್ತಿ ಇರಬೇಕು. ಯಾವ ಯಾರಿಗೆ ಯಾವ ರೀತಿಯಾದ ಶಿಕ್ಷಣವನ್ನು ಒದಗಿಸಿಕೊಡಬೇಕು ಎನ್ನುವುದು ಎಲ್ಲರ ಪರಿಸ್ಥ ಕರ್ತವ್ಯ. ಇಂದು ನಾವು ನೋಡಬಹುದು ಕೆಲವು ಕಾಲೇಜುಗಳಲ್ಲಿ ಅಲ್ಲರುವ ಉಪಾಧ್ಯಾಯರು ಸರಿಯಾಗಿ ಮಾರ್ಗದರ್ಶನ ಮಕ್ಕಳಿಗೆ ಕೊಡದೇ ಹೋದರೆ ಅವರ ಶಿಕ್ಷಣ ಹಾಳಾಗಿ ಹೋಗುತ್ತದೆ. ಕೆಲವು ವೇಳೆ ವಿದ್ಯಾರ್ಥಿಗಳು ಅಲ್ಲರುವ ರೆಕ್ಟರರುಗಳ ಧೋರಣವನ್ನು ಸರಿಯಾಗಿ ಅನುಸರಿಸದೇ ಹೋದರೆ ಅವರಿಗೆ ತೊಂದರೆಯಾಗುತ್ತದೆ. ಎಷ್ಟೋ ಜನ ಹುಡುಗರು ಇಂತಹ ರೆಕ್ಟರುಗಳನ್ನು ಕೇಳಿ ಅನುಕೂಲಮಾಡಿಕೊಳ್ಳುತ್ತಾರೆ, ಕೆಲವರಿಗೆ ಆಗುವುದಿಲ್ಲ. ಅದು ಅವರವರ ಬುದ್ಧಿಶಕ್ತಿಗನುಸಾರ ಹೋಗುತ್ತದೆ. ಸರಿಯಾದ ದಾರಿಯಲ್ಲಿ ಹುಡುಗರನ್ನು ಕರೆದುಕೊಂಡು ಹೋದರೆ ಅವರುಗಳು ಚೆನ್ನಾಗಿ ಓದಿ ಮುಂದೆ ಬರುತ್ತಾರೆ. ಇಲ್ಲದೇ ಇದ್ದರೆ ಇಲ್ಲ. ಇಂದು ಯಾರೋ ಒಬ್ಬರು ಎಲ್ಲೋ ಒಂದು ಕಡೆ ತ್ರಿಭಾಷಾ ಸೂತ್ರ ಬೇಡ ಎಂದರು ಅದಕ್ಕಾಗಿ ಇಲ್ಲದ ಗಲಭೆಗಳಾದವು. ಹೀಗೆ ಗಲಭೆಗಳಲ್ಲಿ ಹೋಗುತ್ತಿದ್ದ ವಿದ್ಯಾರ್ಥಿ ಗಳನ್ನು ನಾನು ಒಂದು ಸಾರಿ ಅವರೊಂದಿಗೆ ಚರ್ಚೆ ಮಾಡಿದಾಗ ಅವರು ಹೇಳಿದರು, ಬೆಂಗಳೂರು ಕಾಲೇಜುಗಳಲ್ಲಿ ಹಿಂದಿ ಬೇಡ ಎಂದು ಹೇಳಿದ್ದಾರೆ, ಅದಕ್ಕಾಗಿ ಹಿಂದಿ ವಿರೋಧ ಚಳುವಳಿ ಮಾಡುವುದಕ್ಕಾಗಿ ಈ ರೀತಿ ಮಾಡುತ್ತಿದ್ದೇವೆ ಎಂದು ಹುಡುಗರು ಹೇಳಿದರು. ಈ ಸಂದರ್ಭದಲ್ಲಿ ನನಗೆ ಒಂದು ಕಥೆ ರಾಮಾಯಣದಲ್ಲಿರುವುದು ಜ್ಞಾಪಕಕ್ಕೆ ಬರುತ್ತದೆ. ಅದು ರಾಮಾಯಣದ ಸುಂದರ ಕಾಂಡದಲ್ಲಿ ಬರುತ್ತದೆ. ಹನುಮಂತ ಸೀತೆಯನ್ನು ಅಶೋಕವನದಲ್ಲಿ ನೋಡಿಕೊಂಡು ಶ್ರೀರಾಮನನ್ನು ನೋಡುವುದಕ್ಕಾಗಿ ವಾಪಸು ಬರುತ್ತಿದ್ದ. ಅವನು ಬರುವಾಗ ಅವನಿಗೆ ಸಂಭ್ರಮವಾದ

ಸ್ವಾಗತವನ್ನು ಕೊಡಬೇಕೆಂದು ಅವರ ಮಿತ್ರರಾದ ಜಾಂಬವಂತ ಇನ್ನಿತರವಾನರರು ಒಂದು ಉಪವನದಲ್ಲಿ ಅವನಿಗೆ ಒಂದು ಊಟದ ಏರ್ಪಾಡನ್ನು ಮಾಡಿದ್ದರು. ಆಗ ಒಬ್ಬ ವಾನರ ತನ್ನ ಕೈಲಿ ಬೋರೆ ಹಣ್ಣು ಎಂದರೆ ನಾವು ಎಲಚಿಹಣ್ಣು ಎಂದು ಹೇಳುತ್ತೇವೆ. ಇಂತಹ ಒಂದು ಹಣ್ಣನ್ನು ಕೈಯಲ್ಲಿಟ್ಟುಕೊಂಡು ಹಸುಕಿದಾಗ ಅದು ಒಂದು ಅಡಿಯಷ್ಟು ಎತ್ತರಕ್ಕೆ ಮೇಲೆ ಹಾರಿ ತಂತೆ. ಇದನ್ನು ನೋಡಿ ಪಕ್ಕದಲ್ಲಿದ್ದ ಇನ್ನೊಂದು ವಾನರ ಇವನು ಒಂದು ಅಡಿಯಷ್ಟು ಮೇಲೆ ಹಾರಿಸಿದ, ನಾನೇಕೆ ಇದನ್ನು ಎರಡು ಅಡಿಯಷ್ಟು ಎತ್ತರಕ್ಕೆ ಹಾರಿಸಬಾರದು ಎಂದು ಅದು ಎರಡು ಅಡಿಯಷ್ಟು ಮೇಲಕ್ಕೆ ಹೋಗುವಂತೆ ಮಾಡಿತು. ಹೀಗೆ ಅಲ್ಲಿದ್ದವರೆರ್ಲಾ ಸೇರಿಕೊಂಡು ಎತ್ತರವಾಗಿ ನೆಗೆಯುವುದಕ್ಕೆ ಹೋದಾಗ ಊಟಕ್ಕಾಗಿ ಮಾಡಿದ ಅನ್ನವೆರ್ಲಾ ಹಾಳಾಗಿ ಹೋಯಿತು. ಹೀಗೆ ನಮ್ಮ ಹುಡುಗರು ಇಂದು ಮಾಡುತ್ತಿರುವ ಹಿಂದಿ ಚಳುವಳಿಯಾಗಿದೆ. ಯಾರೋ ಉತ್ತರ ಪ್ರದೇಶದಲ್ಲಿ ಇಂಗ್ಲಿಷು ಬೇಡ ಎಂದು ಹೇಳಿದರಂತೆ ಅದರಂತೆ ನಾವು ಇಲ್ಲಿ ಹಿಂದಿ ಬೇಡ ಎಂದು ಹೇಳುತ್ತೇವೆ ಮದ್ರಾಸಿನವರು ಹಿಂದಿ ಬೇಡ ಎಂದು ಮೂರು ರೈಲುಗಳನ್ನು ಸುಟ್ಟರು ನಾವು ಇಲ್ಲಿ ಎರಡು ರೈಲುಗಳನ್ನು ಸುಡುತ್ತೇವೆ ಎಂದು ಗೊಂದಲಗಳನ್ನು ಎಬ್ಬಿಸುವುದು ಸರಿಯಾದ ಮಾರ್ಗವಲ್ಲ. ಇದರಿಂದಾಗಿ ನಮ್ಮ ದೇಶವೆರ್ಲಾ ಹಾಳಾಗುತ್ತಿದೆ. ಬಾಲ್‌ಕೆ ಬಂದರ್ ಏಕ್ ಸಮಾನ್ ಹೈ ಎಂದು ಹೇಳುವಂತೆ ಯಾರೋ ಮಾಡಿರುವುದನ್ನು ಇಲ್ಲೂ ಅನುಕರಣ ಮಾಡಬೇಕೆಂದು ಎಂದು ಹುಡುಗರು ಮಾಡುತ್ತಿರುವುದು ಸರಿಯಾದ ತಿಳುವಳಿಕೆ ಇಲ್ಲದೆ ಮಾಡುತ್ತಿರುವ ಚಳುವಳಿಯೇ ವಿನಾ ಬೇರೇನಲ್ಲ. ಇದಕ್ಕೆ ಕಾರಣ ಇವರಿಗೆರ್ಲಾ ಸರಿಯಾದ ಶಿಕ್ಷಣ ಇಲ್ಲದಿರುವುದೇ ಆಗಿದೆ. ಹುಡುಗರು ಕಾಲೇಜುಗಳಿಗೆ ಬರುತ್ತಿರುವಾಗ ಅವರಿಗೆ ಇದು ತಪ್ಪು ಎಂದು ಸರಿಯಾದ ತಿಳುವಳಿಗೆ ಇಪ್ಪೊತ್ತಿನ ದಿನ ಯಾರೂ ಸರಿಯಾಗಿ ಕೊಡಲಿಲ್ಲ. It is the privilege of children to be mischievous.

ಯುವಕರೂ ಕೂಡ ಇದರ ಬಗ್ಗೆ ಸರಿಯಾಗಿ ವಿಶ್ಲೇಷಣೆ ಮಾಡಲಿಲ್ಲ. ಇದಕ್ಕೆರ್ಲಾ ಏನು ಕಾರಣ ಎಂದರೆ, ತ್ರಿಭಾಷಾ ಸೂತ್ರದಲ್ಲಿ ಏನೋ ಕಷ್ಟವಿದೆ, ಎಂದು ಒಂದು ವಾದ ಇದೆ. ತ್ರಿಭಾಷಾ ಸೂತ್ರ ಇರಲೇಬೇಕು ಎನ್ನುವ ಒಂದು ವಾದವೂ ಇದೆ ಮತ್ತು ಇದರ ಬಗ್ಗೆ ಪ್ರಾಮುಖ್ಯವಾದ ಹೇಳಿಕೆಗಳೂ ಬರುತ್ತಿವೆ. ಇದರಿಂದ ಸರಕಾರದ ನೀತಿ ಏನು ಎನ್ನುವುದು ಗೊತ್ತಾಗುತ್ತಿದೆ. ಎಲ್ಲರೂ ಹೇಳುತ್ತಿರುವುದು ಮಾತ್ರ ಭಾಷೆ ಎಂದು ಏನಿದೆ ಅದರಲ್ಲೇ ವಿದ್ಯಾಭ್ಯಾಸವನ್ನು ಕಾಲೇಜು ಮಟ್ಟದವರೆಗೆ ಮಾಡಬೇಕು ಎಂದು. ಏಕೆಂದರೆ ಮಕ್ಕಳಿಗೆ ಅವರ ಮಾತೃ ಭಾಷೆಯಲ್ಲಿ ಗ್ರಹಣ ಶಕ್ತಿ ಚೆನ್ನಾಗಿರುತ್ತದೆ ಅದರಿಂದ ಅವರು ವಿದ್ಯಾಭ್ಯಾಸವನ್ನು ಚೆನ್ನಾಗಿ ಮಾಡಬಲ್ಲರು ಎನ್ನುವುದು ನಿರ್ವಿವಾದವಾದ ವಿಚಾರ. ಎರಡನೇದು ನಮ್ಮ ವ್ಯವಹಾರವೆರ್ಲಾ ಇಂಗ್ಲಿಷು ಮತ್ತು ಹಿಂದಿಯಲ್ಲಿ ಇರಬೇಕು. ಒಂದು ದೃಷ್ಟಿಯಿಂದ ಯೋಚನೆ ಮಾಡುವುದಾದರೆ ಎಷ್ಟೋ ಜನಕ್ಕೆ ಸಂಪರ್ಕ ಭಾಷೆ ಇರಬೇಕಾಗುತ್ತದೆ. ಇವಕ್ಕಾಗಿ ಸರ್ಕಾರ ಹಿಂದಿಯನ್ನು ಸಂಪರ್ಕ ಭಾಷೆಯಾಗಿಡಬಹುದು ಮತ್ತು ಹೆಚ್ಚು ಹೊರೆ ನಮ್ಮ ಹುಡುಗರ ಮೇಲೆ ಬೀಳದಂತೆ ಮಾಡಬೇಕು ಎಂದೂ ಹೇಳುತ್ತಿದ್ದಾರೆ. ಇಂಗ್ಲಿಷನ್ನು ಕಲತುಕೊಳ್ಳದಿದ್ದರೆ ಪರದೇಶಗಳೊಡನೆ ಸಂಪರ್ಕವನ್ನು ಇಟ್ಟುಕೊಳ್ಳುವುದು ಕಷ್ಟವಾಗುತ್ತದೆ; ಹಿಂದಿಯನ್ನು ತೆಗೆದು ಕೊಳ್ಳಬೇಕಾದುದು ಒಂದು ಸರಿಯಾದ ತತ್ವ; ಆದರೆ ಹಿಂದಿ ಕಲಿಯದೇ ನೌಕರಿಗಳನ್ನೆಲ್ಲ ತೆಗೆದುಕೊಳ್ಳುವುದು ಸರಿಯಲ್ಲ ಎಂದು ಒಂದು ವಾದ ಇದೆ. ಸರಕಾರದ ನೌಕರಿಗಳಿಗಾಗಿ ಜನಸಾಮಾನ್ಯರು ಬರುವ ಸಂಖ್ಯೆ ಅಷ್ಟೇನಿಲ್ಲ. ಎಲ್ಲರೂ ಉದ್ಯೋಗಗಳಿಗೇ ಬರುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಸುವ್ಯವಹಾರ ನಡೆಯಬೇಕು ಮತ್ತು ಭಾರತ ದೇಶಕ್ಕೆ ಹಾಗೂ ಇತರ ದೇಶಗಳೊಂದಿಗೆ ಸಂಪರ್ಕ ಹೊಂದಲೇ ಬೇಕು. ಇದು ಅತ್ಯಾವಶ್ಯಕ, ಇದರಂತೆ ವ್ಯವಹಾರಕ್ಕೆ ಹಿಂದಿ ಇರಲೇ ಬೇಕು. ಇದರ ಬಗ್ಗೆ ಮಕ್ಕಳಿಗೆ ಸರಿಯಾದ ತಿಳುವಳಿಕೆ ಬರಬೇಕು ಅಷ್ಟೇ. ಇಪ್ಪೊತ್ತು ಯಾರೋ ಬೇಡ ಎಂದು ಹೇಳಿದರು ಅದರಿಂದ ನಮ್ಮ ಹುಡುಗರೂ ಹಿಂದಿ ಬೇಡ ಎಂದು ವಿರೋಧ ಮಾಡುವುದಕ್ಕೆ ಹೊರಟರು. ಸರಕಾರದವರು ತ್ರಿಭಾಷಾ ಸೂತ್ರ ಇರಬೇಕು ಎಂದು ಒಪ್ಪಿರುವಾಗ ಇದರ ಬಗ್ಗೆ ಯಾರ ಮೇಲೆಯೂ ಹೆಚ್ಚು ಹೊರೆ ಬೀಳದಂತೆ ಮಾಡಬೇಕು. ಇದನ್ನು ನಮ್ಮ ಮಾನ್ಯ ಮಂತ್ರಿಗಳೂ ಅನೇಕ ಸಂದರ್ಭಗಳಲ್ಲಿ ಹೇಳುತ್ತಿರುವಾಗ ಇದರ ಬಗ್ಗೆ ಹುಡುಗರೂ ಯೋಚನೆ ಮಾಡಬೇಕು. ಅಲ್ಲದೆ ನಮ್ಮ ಮಾನ್ಯ ವಿದ್ಯಾ ಮಂತ್ರಿಗಳು ಹಿಂದಿ ಭಾಷೆಯನ್ನು ಕಲತು ಪರೀಕ್ಷೆಗಳಿಗೆ ಹೋದಾಗ ಅವರಿಗೆ ಸೊನ್ನೆ ನಂಬರು ಬಂದರೂ ಅವರನ್ನು ಪಾಸಾದಂತೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಹಿಂದಿ ವಿಷಯವಾಗಿ ತಿಳುವಳಿಕೆ ವಿದ್ಯಾರ್ಥಿಗಳಿಗೆ ಇದ್ದರೆ ಸಾಕು ಎಂದು ಇಲ್ಲಿ ಆಶ್ವಾಸನೆಗಳನ್ನು ನೀಡಿರುವಾಗ ಇಂದು ಹಿಂದಿ ಬೇಡ ಎಂದು ಹೇಳುವುದು ಅರ್ಥವಿಲ್ಲದ್ದು. ಸರಕಾರ ತ್ರಿಭಾಷಾ ಸೂತ್ರಕ್ಕೆ ಏನು ಮನ್ನಣೆ ಕೊಡಬೇಕು

(ಶ್ರೀ ಕೆ. ನುಬ್ಸರಾವ್)

ಎಂದು ಹೇಳುತ್ತಾರೋ ಅದು ಸರಿಯಾಗಿರುವಂತೆ ಮತ್ತು ಎಲ್ಲರಿಗೂ ತೃಪ್ತಿಕರವಾಗಿರುವಂತೆ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದೂ ಅಲ್ಲದೆ ದಕ್ಷಿಣದವರು ಹಿಂದೆ ಬ್ರಿಟಿಷರ ಕಾಲದಿಂದಲೂ ಕೂಡ ಇದ್ದ ಇಂಗ್ಲಿಷು ಭಾಷೆಯನ್ನು ಬಹಳ ಚೆನ್ನಾಗಿ ಕಲತುಕೊಂಡಿರುವವರು ಇದ್ದರು. ಅದರಲ್ಲೂ ಕೆಲವು ಸಂದರ್ಭಗಳಲ್ಲಿ ಇಂಗ್ಲಿಷಿನವರಿಗಿಂತಲೂ ಮೀರಿಸುವಂತಹ ಇಂಗ್ಲಿಷು ಭಾಷಣವನ್ನು ಮಾಡುತ್ತಿದ್ದರು. ಶ್ರೀಮಾನ್ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿ ಗಳವರು ಇಂತಹ ಮಹಾಮಹಿಮರಲ್ಲಿ ಒಬ್ಬರಾಗಿದ್ದರು. ಇವರಂತೆ ಇಂಗ್ಲಿಷಿನಲ್ಲಿ ಭಾಷಣ ಮಾಡುವವರೇ ಇಲ್ಲ ಎನ್ನುವಂತೆ ಆಗ ಇದ್ದ ಪರಂಗಿಯವರನ್ನೂ ಮೀರಿಸಿದಂತೆ ಮಾತಾಡುತ್ತಿದ್ದರು. ಅವರು ಉಪಯೋಗಿಸುತ್ತಿದ್ದ ಪದಗಳು ಎಷ್ಟೋ ಜನರನ್ನು ಆಚ್ಚರಿಗೊಳಿಸುವಂತಿದ್ದವು. ಅವರು ಇಷ್ಟು ಹೆಚ್ಚಿನ ಪಾಂಡಿತ್ಯವನ್ನು ಪಡೆದಿದ್ದರು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಹಾಗೇ ಇಂದು ತ್ರಿಭಾಷಾ ಸೂತ್ರ ಎಂದು ತರಬೇಕು; ಮತ್ತು ಇದು ಎಲ್ಲರಿಗೂ ಅನುಕೂಲವಾಗಿದೆ ಎಂದು ಹೇಳುತ್ತಿದ್ದಾರೆ. ಕೆಲವು ವೇಳೆ ಹುಡುಗರು ಭಾಷೆಯನ್ನು ಅಷ್ಟು ಚೆನ್ನಾಗಿ ಓದಿ ಪಾಂಡಿತ್ಯ ಪಡೆದು ಗುರುವಿಗೇ ತಿರುಮಂತ್ರ ಹೇಳುವ ಹಾಗೆ ಮಾಡಬಲ್ಲರು. ಆದರೆ ಇವರಿಗೆ ಸರಿಯಾದ ತಿಳುವಳಿಕೆ ಕೊಡಬೇಕು. ಯಾವ ಭಾಷೆಯನ್ನಾದರೂ ತೆಗೆದುಕೊಳ್ಳಬಹುದು. ಅದನ್ನು ಹುಡುಗರು ಓದುವುದಕ್ಕೆ ಹಿಂದು ಮುಂದು ನೋಡುವುದಿಲ್ಲ. ಕೆಲವು ವೇಳೆ ನಾವೇ ನೋಡಿರುವ ಹಾಗೆ ಕೆಲವು ಯುವಕರು ಇಂಗ್ಲಿಷಿನಲ್ಲಿ ಒಳ್ಳೆಯ ಪಾಂಡಿತ್ಯ ಪಡೆದು ಪರಂಗಿಯವರನ್ನು ಮೀರಿಸಿದಂತೆ ಮಾತನಾಡುವ ಶಕ್ತಿಯನ್ನು ಪಡೆದಿದ್ದಾರೆ. ಇಂತಹ ಪಂಕ್ತಿಗೆ ಸೇರಿದಂತಹ ಶ್ರೀ ಸಿ. ಆರ್. ದಾಸ್, ಸಿ. ರಾಜಗೋಪಾಲಚಾರಿ, ಪಂಡಿತ ಜವಹರಲಾಲ್ ನೆಹರು ಹಾಗೂ ಮಹಾತ್ಮಾ ಗಾಂಧಿಯವರು ಗಮನಾರ್ಹವಾಗಿ ಇಂಗ್ಲಿಷಿನಲ್ಲಿ ಭಾಷಣ ಮಾಡುತ್ತಿದ್ದರು. ಭಾಷೆಯ ವಿಷಯದಲ್ಲಿ ಯಾವ ರಾಜಕೀಯವೂ ಇಲ್ಲ. ವಿದ್ಯಾರ್ಥಿಗಳಾದಂತಹವರು ಯಾವ ಭಾಷೆಯನ್ನಾದರೂ ಕಲಿಯಬಲ್ಲರು. ನಮ್ಮನ್ನೆ ಇಲ್ಲಿ ಭಾಷೆಯ ಬಗ್ಗೆ ಇಷ್ಟು ಹೊಡ್ಡದಾಗಿ ಇಲ್ಲದ ವಾದ ವಿವಾದಗಳನ್ನು ಮಾಡುವುದಕ್ಕೆ ಹುಡುಗರು ಹೋಗುವುದಿಲ್ಲ ಎನ್ನುವುದರಲ್ಲಿ ನನಗೆ ಸಂದೇಹವೇ ಇಲ್ಲ. ಆದರೆ ಅವರಿಗೆ ಸರಿಯಾದ ಮಾರ್ಗದರ್ಶನವನ್ನು ಕೊಡುವಂತಹವರು ಇರಬೇಕು. ಪಂಡಿತ ನೆಹರೂರವರೇ ಎಷ್ಟೋ ಕಡೆಗಳಲ್ಲಿ ಅವರು ಇಂಗ್ಲಿಷಿನಲ್ಲಿ ಮಾಡಿರುವ ಭಾಷಣಗಳನ್ನು ನಾವು ಕೇಳಿದ್ದೇವೆ. ಅಷ್ಟು ಹೆಚ್ಚಿನ ಜ್ಞಾನ ಹಾಗೂ ಪಾಂಡಿತ್ಯವನ್ನು ಅವರು ಸಂಪಾದನೆ ಮಾಡಿದ್ದರು. ನಮ್ಮ ಮಕ್ಕಳೂ ಕೂಡ ಇಂತಹ ಮಹಾನುಭಾವರನ್ನು ಅನುಸರಿಸಿಕೊಂಡು ಹೆಚ್ಚು ಪಾಂಡಿತ್ಯವನ್ನು ಸಂಪಾದನೆ ಮಾಡುವುದು ಅಗತ್ಯ. ಈಗ ಏನಾಗಿದೆ ಎಂದರೆ, ಇಲ್ಲಿ ಹುಡುಗರಿಗೆ ಹಿಂದಿಯ ಬಗ್ಗೆ ಸರಿಯಾದ ತಿಳುವಳಿಕೆ ಕೊಟ್ಟಿಲ್ಲ. ಹಿಂದಿಯಲ್ಲಿ ನಾವು ನೋಡುವಾಗ ಬರೀ ಸಂಸ್ಕೃತದ ಪದಗಳೇ ಹೆಚ್ಚಾಗಿರುತ್ತವೆ. ಆದರೆ ಇದರಲ್ಲಿರುವ ವ್ಯಾಕರಣದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಇದನ್ನು ಸ್ವಲ್ಪ ಗಮನಿಸಬೇಕು. ಹಿಂದಿ ಭಾಷೆ ಎನ್ನುವುದು ದೇವನಾಗರಿ ಲಿಪಿಯಲ್ಲಿರುವಂತಹ ದನ್ನೇ ಎಲ್ಲರೂ ಒಪ್ಪಿರುವುದು. ಹಿಂದಿ ಭಾಷೆಯಲ್ಲಿ ತೆಲುಗು ಹಾಗೂ ತಮಿಳು ಭಾಷೆಗಳ ಸಂಸ್ಕೃತಿಗಿಂತ ಹೆಚ್ಚಾದ ಸಂಸ್ಕೃತಿ ಈ ಭಾಷೆಯಲ್ಲ ಇಂದು ಇರುವುದನ್ನು ನಾವು ಕಾಣಬಹುದು. ಹುಡುಗರಿಗೆ ಭಾಷೆಯೇ ಪ್ರಾಧಾನ್ಯವಲ್ಲ. ಭಾಷೆಯನ್ನು ನಾವು ಕಲಿಯುವುದಿಲ್ಲ ಎಂದು ಎಲ್ಲೂ ಅವರು ಹೇಳಿಲ್ಲ. ಇದನ್ನು ಎಲ್ಲರೂ ಒಪ್ಪುವಂತಹ ಮಾತು. ಹಿಂದಿಯಲ್ಲಿ ನಾವು ನೋಡುವಾಗ ನೂರಕ್ಕೆ 80ರಿಂದ 90 ಭಾಗದಷ್ಟು ಪದಗಳು ಸಂಸ್ಕೃತದಿಂದ ಬಂದವುಗಳು. ಎಲ್ಲೋ ಸ್ವಲ್ಪ ವ್ಯಾಕರಣದಲ್ಲಿ ಸ್ವಲ್ಪ ವ್ಯತ್ಯಾಸಗಳು ಬರುತ್ತವೆ. ಇಂತಹ ಭಾಷೆಯನ್ನು ಹುಡುಗರು ಕಲಿಯುವುದರಲ್ಲಿ ಕಷ್ಟವೇನೂ ಇಲ್ಲ. ಮತ್ತು ನಮ್ಮ ಹುಡುಗರಿಗೆ ಇದೇನೂ ಕಠಿಣವಾಗಲಾರದು ಎಂದು ನನ್ನ ಒಂದು ವಾದ. ಇದಕ್ಕಾಗಿ ನಣ್ಣ ಮಕ್ಕಳಿಗೆ ಸರಿಯಾಗಿ ಮಾರ್ಗದರ್ಶನ ಕೊಟ್ಟರೆ ಅವರಿಗೆ ಈ ಭಾಷೆಯನ್ನು ಕಲಿಯುವುದಕ್ಕೆ ಕಷ್ಟವೇನೂ ಆಗುವುದಿಲ್ಲ. ಅವರಿಗೆ ಸರಿಯಾಗಿ ಹೇಳಿದರೆ ಇದನ್ನು ಖಂಡಿತ ತಿಳಿದುಕೊಳ್ಳುತ್ತಾರೆ.

ಇನ್ನು ಪಠ್ಯ ಪುಸ್ತಕಗಳ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಪ್ಯೆ. ಎಸ್. ಹಾಟೀಲರವರು ಪಠ್ಯ ಪುಸ್ತಕ ತೆಗೆದುಕೊಂಡು ಬಂದು ಭಾಷಣ ಮಾಡುವಾಗ್ಗೆ ಅವು ಯಾವ ರೀತಿ ಇವೆ ಎಂಬುದನ್ನು ತೋರಿಸಿದ್ದಾರೆ. ಅವರು ಪಠ್ಯ ಪುಸ್ತಕದಿಂದ ಓದಿದ ಕೆಲವು ಮಾತು ಕೇಳಿದಾಗ ಕಿವಿ ಮುಚ್ಚಿಕೊಳ್ಳಬೇಕು, ಕಣ್ಣು ಮುಚ್ಚಿಕೊಳ್ಳಬೇಕು ಎಂದು ಅನಿಸಿತು. ಇಂಥ ಪಠ್ಯ ಪುಸ್ತಕಗಳ ಪರಿಣಾಮ ಚಿಕ್ಕ ಮಕ್ಕಳ ಮನಸ್ಸಿನ ಮೇಲೆ ಯಾವ ರೀತಿಯಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಇವುಗಳಲ್ಲಿ ಅನೇಕ ವಿಷಯಗಳು ಸುಧಾರಣೆಯಾಗಬೇಕಾಗಿದೆ ಅನ್ನುವುದನ್ನು ಮಾನ್ಯ ವಿದ್ಯಾ ಮಂತ್ರಿಗಳು ಗಮನಿಸಬೇಕು. ಇನ್ನು ಮೂರನೇ ತರಗತಿಯಲ್ಲಿರುವ ನನ್ನ ಹುಡುಗಿ

ಯೊಬ್ಬಳು ಲೆಕ್ಕ ಹೇಳಿಕೊಡಿ ಎಂದು ನನ್ನನ್ನು ಕೇಳಿದಳು. ನಾನು ಲೆಕ್ಕ ಓದಿ ನೋಡಿದೆ. ಒಂದು ಗುದಾಮದ ಉದ್ದ 12 ಅಡಿ ಅಗಲ 8 ಅಡಿ ಇರುತ್ತದೆ, ಇದರ ಕ್ಷೇತ್ರಫಲ ಎಷ್ಟು ಎಂದು ಆ ಲೆಕ್ಕ ಇದ್ದಿತ್ತು. ಗುದಾಮು ಅಂದರೆ ಏನು ಎಂದು ಅವಳು ಕೇಳಿದಳು ಅವಳಿಗೂ ಅದರ ಅರ್ಥ ಗೊತ್ತಿಲ್ಲ. ನನಗೂ ಸಹ ಗುದಾಮು ಅಂದರೆ ಏನು ಎನ್ನುವುದು ಗೊತ್ತಾಗಲಿಲ್ಲ. ಇಂಥ ಗೊತ್ತಾಗದೇ ಇದ್ದ ಪದ ಯಾಕೆ ಉಪಯೋಗಿಸುತ್ತಾರೆ! ಮೈಸೂರು ಸ್ಟೇಟ್ ಕೋಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಯ ವರದಿಯಲ್ಲಿ ಧಾನ್ಯ ಸಂಗ್ರಹಕ್ಕೆ ಗುದಾಮು ಅಂದರೆ ಗೋಡೌನ್ ಇರಲಲ್ಲ ಎಂದು ಬರೆದಿತ್ತು. ಅದನ್ನು ನೋಡಿ ಗುದಾಮು ಅಂದರೆ ಗೋಡೌನ್ ಎಂದು ನನಗೆ ಅರ್ಥವಾಯಿತು. ಗುದಾಮು ಎಂಬ ಶಬ್ದದ ಬದಲು ಮಳಿಗೆ ಎಂದು ಬರೆದಿದ್ದರೆ ಏನು ಕಷ್ಟವಿತ್ತು? ಅಭಾನವಾಗುವ ರೀತಿಯಲ್ಲಿ ಭಾವಾಂತರ ಮಾಡಿ ಪದಗಳನ್ನು ಉಪಯೋಗಿಸುವುದರ ಬದಲು ಗೋಡೌನಿನಲ್ಲಿ ಎಂದು ಪದ ಉಪಯೋಗಿಸಿದ್ದರೆ ಏನು ಅಭಾಸವಾಗುತ್ತಿತ್ತು! ಕೆಲವು ಇಂಗ್ಲೀಷ್ ಪದಗಳನ್ನು ಹಾಗೆಯೇ ತೆಗೆದುಕೊಂಡರೆ ಚೆನ್ನಾಗಿರುತ್ತದೆ. ಅವು ಬಳಕೆಯಲ್ಲಿ ಬಂದಿರುತ್ತವೆ ಮತ್ತು ಎಲ್ಲರಿಗೂ ಕೂಡಲೇ ಅರ್ಥವಾಗುತ್ತದೆ. ಎನೇನೋ ಪದಗಳನ್ನು ಹುಡುಕಿಕೊಂಡು ಅರ್ಥವಾಗದ ರೀತಿಯಲ್ಲಿ ಶಾಸ್ತ್ರೀಯ ಮತ್ತು ಪೌಜ್ಞಾನಿಕ ಪದಗಳನ್ನು ಸೃಷ್ಟಿಸಿದರೆ ಅದು ಯಾವ ಭಾಷೆ? ಅದು ದೇವ ಭಾಷೆಯೇ, ಪಿಶಾಚಿ ಭಾಷೆಯೇ ಎಂದು ನನಗೆ ಅನಿಸುತ್ತದೆ. ಸುಲಭವಾಗಿ ಜನಕ್ಕೆಳಿಗೆ ಅರ್ಥವಾಗುವುದನ್ನು ಬಿಟ್ಟು ಅರ್ಥವಾಗದ ಪದ ಉಪಯೋಗಿಸಿದರೆ ಏನು ಪ್ರಯೋಜನ! ಕ್ಯಾಲು ಈ ಪದ ಯಾರಿಗೆ ಅರ್ಥವಾಗುವುದಿಲ್ಲ? ಅರ್ಥವಾಗುವ ಇಂಗ್ಲೀಷ್ ಪದಗಳನ್ನು ಸಂಕೋಚ ಬಿಲ್ಲದೆಹಿಂದು ಮುಂದು ನೋಡದ್ದೆ ನಮ್ಮ ಕನ್ನಡ ಭಾಷೆಯಲ್ಲಿ ಸೇರಿಸಿಕೊಂಡು ನಮ್ಮ ಕನ್ನಡ ಭಂಡಾರವನ್ನು ಬೆಳೆಸಬೇಕು. ಅನೇಕ ಭಾಷೆಗಳ ಒಳ್ಳೇ ಪದಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಸೇರಿಸಿಕೊಂಡಿರುವುದರಿಂದಲೇ ಇಂದು ಇಂಗ್ಲೀಷ್ ಭಾಷೆಯು ಇಂದು ಜಗತ್ತಿನಲ್ಲಿ ಒಂದು ದೊಡ್ಡ ಭಾಷೆಯಾಗಿದೆ. ಅದುದರಿಂದ ಬಳಕೆಯಲ್ಲಿರುವ ಪದಗಳನ್ನು ಬಿಟ್ಟು ತರ್ಜುಮೆ ಮಾಡಿ ಅರ್ಥವಾಗದ ರೀತಿಯಲ್ಲಿ ಇಡುವುದು ಒಳ್ಳೆಯದಲ್ಲ ಎಂದು ನನ್ನ ಅಭಿಪ್ರಾಯ. ಯಾಕೆಂದರೆ, ಪೌಜ್ಞಾನಿಕ ಪದಗಳನ್ನು ಸಂಶೋಧನೆ ಮಾಡಿ ಸೃಷ್ಟಿ ಮಾಡಬೇಕಾಗುತ್ತದೆ. ಈ ಹೊಸ ಪದಗಳು ಸಾವಿರಾರು ವರ್ಷಗಳ ಹಿಂದೆ ಬಳಕೆಯಲ್ಲಿ ಇರಲಲ್ಲ. ಆದುದರಿಂದ ಅವು ನಮ್ಮ ಕನ್ನಡ ಭಾಷೆಯಲ್ಲಿ ಇಲ್ಲ. ಆದುದರಿಂದ ಸಾಮಾನ್ಯವಾಗಿ ಎಲ್ಲರಿಗೂ ಅರ್ಥವಾಗುವ ಬಳಕೆಯಲ್ಲಿ ಇರುವ ಶಬ್ದಗಳನ್ನು ನಮ್ಮ ಕನ್ನಡ ಭಾಷೆಯಲ್ಲಿ ತೆಗೆದುಕೊಳ್ಳುವುದು ಒಳ್ಳೆಯದು. ರೇಡಿಯೋ ಅಂದ ಕೂಡಲೇ ಎಲ್ಲರಿಗೂ ಅರ್ಥವಾಗುತ್ತದೆ. ಅದನ್ನು ಹೇಗೆ ಟ್ರಾನ್ಸಲೇಟ್ ಮಾಡುವುದು? ಅದುದರಿಂದ ಪಠ್ಯ ಪುಸ್ತಕಗಳ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ ಎಲ್ಲರಿಗೂ ಸುಲಭ ಸಾಧ್ಯವಾಗುವಂತೆ ಮಾಡಿ ಕರ್ನಾಟಕದಲ್ಲೆಲ್ಲಾ ಒಂದೇ ಮಾದರಿಯ ಭಾಷೆ ಒಂದೇ ರೀತಿಯ ಸಂಪ್ರದಾಯ ಇರುವ ಹಾಗೆ ಪ್ರಾಥಮಿಕ ಮಾಧ್ಯಮಿಕ ವಿದ್ಯಾಭ್ಯಾಸದ ಕ್ರಮವು ಇರುವ ಹಾಗೆ ಮಾಡಿದರೆ ಒಳ್ಳೇ ತಳಹದಿ ಹಾಕಿದ ಹಾಗೆ ಆಗುತ್ತದೆ. ಇದರಿಂದ ಮಕ್ಕಳು ಮುಂದೆ ಕಾಲೇಜುಗಳಿಗೆ ಹೋಗಿ ಓದುವಾಗ ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ನ್ಯೂನತೆಗಳನ್ನು ಕೂಡಲೇ ಸರಿಪಡಿಸಬೇಕು. ಈ ಬೇಡಿಕೆಗೆ ಹಣ ಒದಗಿಸಿರತಕ್ಕದ್ದನ್ನು ನೋಡಿದರೆ ಮಾನ್ಯ ವಿದ್ಯಾ ಮಂತ್ರಿಗಳನ್ನು ಅಭಿನಂದನೆ ಮಾಡುತ್ತೇನೆ, ಅರ್ಥ ಮಂತ್ರಿಗಳನ್ನು ಅಭಿನಂದನೆ ಮಾಡುತ್ತೇನೆ.

ಇನ್ನು ಅರ್ಥ ಮತ್ತು ವಿಷಯ ಇವು ಒಂದೇ ನಾಣ್ಯದ ಎರಡು ಮುಖಗಳು ಇದ್ದ ಹಾಗೆ. ಒಂದು ಮುಖ ಸವೆದಿದ್ದರೂ ಅಂಥ ನಾಣ್ಯಕ್ಕೆ ಬೆಲೆ ಇಲ್ಲ, ಇದರಿಂದ ದೇಶದ ಪ್ರಗತಿ ಕುಂಠಿತವಾಗುತ್ತದೆ, ಪ್ರಗತಿಯಾಗುವುದಿಲ್ಲ. ಎರಡೂ ಪ್ರಗತಿ ಸೇರಿದರೆ ಒಳ್ಳೆಯದಾಗುತ್ತದೆ. ಈ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅನೇಕರು ಟೀಕೆ ಮಾಡಿದ್ದಾರೆ. ಹಾಗೂ ಅನೇಕ ಉಪಯುಕ್ತ ಸಲಹೆಗಳನ್ನು ಕೂಡ ಸೂಚನೆ ಮಾಡಿದ್ದಾರೆ. ಎದುರು ಪಕ್ಷದವರು ಬೇಗ ದೇಶ ಮುಂದುವರಿಯಲಿ, ಈ ಕಾರ್ಯ ಮಾಡಿದ್ದರೆ ದೇಶ ಮುಂದುವರಿಯುತ್ತಿತ್ತು ಎಂದು ಟೀಕೆ ಮಾಡಿದ್ದಾರೆ. ಇದು ಟೀಕೆ ಎಂದು ನೋಡುವುದು ಅನಗತ್ಯ. ಅವರು ದೋಷ ಎತ್ತಿ ತೋರಿಸಿದರು ಎಂದು ಅವರು ಶತ್ರುಗಳಲ್ಲ. ಕೆಲವು ದೋಷಗಳನ್ನು ನಾವೂ ಸಹ ಕಣ್ಣಾರೆ ಕಂಡಿದ್ದೇವೆ. ಪ್ರಾಮುಖ್ಯವಾದ ಒಂದು ದೋಷ ಅಂದರೆ ರಸ್ತೆ ಸಾರಿಗೆಯಲ್ಲಿ ಬಹಳ ತಪ್ಪು ನಡೆಯುತ್ತಿದೆ ಇದರಿಂದ ಬಹಳ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ಯಾರು ಕಣ್ಣು ಮುಚ್ಚಿಕೊಂಡಿದ್ದಾರೆ? ಹದಿನೈದು ದಿವಸದಿಂದ ಪ್ರತಿ ಸಾಯಂಕಾಲ ನಾನು ನೋಡಿದ್ದೇನೆ. ಮೈಸೂರಿಗೆ 5 ಗಂಟೆಗೆ ಹೋಗುವ ಬಸ್ಸು ಆರು ಗಂಟೆಗೆ ಹೊರಡುತ್ತದೆ. ಐದೂವರೆ ಗಂಟೆಗೆ ಹೊರಡಬೇಕಾದ ಬಸ್ಸು ಏಳು ಗಂಟೆಗೆ ಹೊರಡುತ್ತದೆ. ಏಳು ಗಂಟೆಗೆ ಹೊರಡಬೇಕಾದ ಬಸ್ಸು ಎಂಭತ್ತು ಗಂಟೆಗೆ ಹೊರಡುತ್ತದೆ. ಈ ದೋಷ ಯಾಕೆ? ಆರು ಗಂಟೆಗೆ ಹೋಗಬೇಕಾದ ಬಸ್ಸು ಏಳು ಗಂಟೆಯಾದರೂ ಹೊರಡದಿದ್ದರೆ ಏಳು ಗಂಟೆಗೆ ಹೋಗಬೇಕಾದ ಜನ ಸೇರುತ್ತಾರೆ ಅಲ್ಲಿ ಜನನಂದಣಿಯಾಗಿ ಬಸ್ಸಿನಲ್ಲಿ ಉಸಿರು ತೆಗೆದು

(ಶ್ರೀ ಕೆ. ಸುಬ್ಬರಾವ್)

ಕೊಳ್ಳುವುದಕ್ಕಾಗುವುದಿಲ್ಲ. 270 ಬಸ್ಸುಗಳನ್ನು ಓಡಿಸುತ್ತಿರುವ ಈ ಸಾರಿಗೆ ಸಂಸ್ಥೆಯವರು ಸರಿಯಾದ ವೇಳೆಗೆ ಬಸ್ಸು ಏಕೆ ಹೊರಡಿಸುವುದಿಲ್ಲ? ಸರಿಯಾದ ವ್ಯವಸ್ಥೆ ಏಕೆ ಮಾಡುವುದಿಲ್ಲ? 75 ಲಕ್ಷ ರೂಪಾಯಿ ನಷ್ಟವಾಯಿತು ಎಂದು ಹೇಳುತ್ತಾರೆ. ಈ ನಷ್ಟ ತುಂಬಿಕೊಳ್ಳುವುದಕ್ಕೆ ತೆರಿಗೆ ರೂಪದಲ್ಲಿ ಅದು ಬರುತ್ತದೆ. 18 ಕೋಟಿ ರೂಪಾಯಿ ಕೊಟ್ಟು 17 ಸಾವಿರ ಸಿಬ್ಬಂದಿ ಇಟ್ಟುಕೊಂಡು ನೀವು ಏನು ಮಾಡುತ್ತೀರಿ ಅಂದರೆ, ಬೆಟ್ಟ ಅಗೆದು ಇಲಿ ತಂದು ತೋರಿಸುತ್ತೀರಿ. 18 ಕೋಟಿ ಬಂಡವಾಳಕ್ಕೆ 50 ಲಕ್ಷ ರೂಪಾಯಿ ಸಂಪಾದನೆಯಾದರೆ ಮೂರು ಪರ್ಸೆಂಟ್ ಬಡ್ಡಿ ಕೂಡ ಆಗುವುದಿಲ್ಲ. ಆದುದರಿಂದ ರಸ್ತೆ ಸಾರಿಗೆಯಲ್ಲಿ ಇಷ್ಟು ಏತಕ್ಕೆ ನಷ್ಟವಾಗುತ್ತದೆ ಎನ್ನುವುದನ್ನು ಗಮನಿಸಬೇಕು. ಒಂದು ಮಾತು ಈ ಸಮಯದಲ್ಲಿ ಹೇಳಬಹುದು. ಪ್ರಾಮುಖ್ಯವಾದ ಮೇನ್ ರಸ್ತೆಗಳಲ್ಲಿ ಪ್ರಯಾಣಿಕರಿಗೆ ಟಿಕೆಟ್ಸ್ ಕೊಡುತ್ತಾರೆ. ಆದರೆ ಎಂಟು ಹತ್ತು ಮೈಲಿ ಒಳಗಡೆ ಪ್ರದೇಶದಲ್ಲಿ ಇರುವ ರಸ್ತೆಗಳಲ್ಲಿ ಓಡಾಡುವ ಬಸ್ಸುಗಳಲ್ಲಿ ಪ್ರಯಾಣಿಕರಿಂದ ದುಡ್ಡು ತೆಗೆದುಕೊಂಡು ಟಿಕೆಟ್ಸ್ ಕೊಡುವುದಿಲ್ಲ. ಇದನ್ನು ನೀವು ಚೆಕ್ ಮಾಡಿ ನೋಡಬಹುದು. ರಾತ್ರಿ ಎಂಟು ಗಂಟೆಯ ನಂತರ ಯಾರು ಚೆಕ್ ಮಾಡುತ್ತಾರೆ? ಈ ರೀತಿ ದುಡ್ಡು ಅಪವ್ಯಯವಾಗುತ್ತದೆ. ಹಾಗು ಬಸ್ಸುಗಳು ಹೊರಡುವುದು ತಡವಾಗುವುದರಿಂದ ಇನ್ನೊಂದು ಅನ್ಯಾಯವಾಗುತ್ತದೆ. ಬಸ್‌ಸ್ಟಾಂಡಿನಲ್ಲಿ ಬಸ್ಸು ಹೊರಡುವ ಸಮಯಕ್ಕೆ ಟ್ಯಾಕ್ಸಿ ನಿಂತಿರುತ್ತವೆ. ಎರಡು ರೂಪಾಯಿ ಕೊಡಿ ಮೂರು ರೂಪಾಯಿ ಕೊಡಿ ಎಂದು ಟ್ಯಾಕ್ಸಿಯವರು ಪ್ರಯಾಣಿಕರನ್ನು ತೆಗೆದುಕೊಂಡು ಹೋಗುತ್ತಾರೆ. ದಿನಾಲು ಬೆಂಗಳೂರು ಮೈಸೂರು ನಡುವೆ ಇನ್ನೂರು ಮುನ್ನೂರು ಜನ ಟ್ಯಾಕ್ಸಿಯಲ್ಲಿ ಹೋಗುತ್ತಾರೆ. ಇಷ್ಟು ಪ್ರಯಾಣಿಕರಿಂದ ಬರಬಹುದಾದ ದುಡ್ಡು ಸಾರಿಗೆ ಸಂಸ್ಥೆಗೆ ನಷ್ಟವಾಗುತ್ತದೆ. ಒಂದು ದಿನಕ್ಕೆ ಒಂದು ಸಾವಿರ ರೂಪಾಯಿ ಸಾರಿಗೆ ಸಂಸ್ಥೆಗೆ ಉಳಿಯುತ್ತಿತ್ತು. ಅಲ್ಲಿರುವ ಪೋಲೀಸ್ ಅಧಿಕಾರಿಯನ್ನು ಕೇಳಿದರೆ ಟ್ಯಾಕ್ಸಿ ನಿಲ್ಲಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದೆ ಏನು ಮಾಡುವುದು ಎಂದು ಕೇಳುತ್ತಾನೆ. ಸಾರಿಗೆ ಸಂಸ್ಥೆಯನ್ನು ಸರಿಯಾಗಿ ನಡೆಸುವುದಕ್ಕೆ ಆಗದಿದ್ದರೆ ಬೀರೆಯವರಿಗೆ ಕೊಟ್ಟು ಬಿಡಿ. ನಿಮಗೆ ಸರಿಪಡಿಸುವ ಧೈರ್ಯವಿಲ್ಲ. ಇದರಲ್ಲಿ ಒಂದು ಸರಿಯಾದ ನೀತಿ ಇಲ್ಲ. ಆದುದರಿಂದ ಇದಕ್ಕೆ ತೀವ್ರ ಗಮನ ಕೊಟ್ಟು ಸರಿಪಡಿಸಬೇಕು. ಇದರಲ್ಲಿ ಕಷ್ಟವೇನಿಲ್ಲ. ನಿಮಗೆ ಸಾಕಷ್ಟು ಸಿಬ್ಬಂದಿ ಇದೆ. ಇದನ್ನು ಸುಲಭವಾಗಿ ಕಂಡು ಹಿಡಿಯಬಹುದು. ಚೆಕ್ ಮಾಡದೇ ಇರುವುದರಿಂದ ಓವರ್‌ಲೋಡ್ ಕೂಡ ಮಾಡುತ್ತಾರೆ. ಆದುದರಿಂದ ಅಲ್ಲಲ್ಲಿ ಸರಿಯಾಗಿ ಚೆಕ್ ಮಾಡಿಸಬೇಕು. ಚೆಕ್ ಮಾಡದೇ ಇರುವುದರಿಂದ ಸಾರಿಗೆ ಸಂಸ್ಥೆಗೆ ನಷ್ಟ ಹಾಗು ಜನರಿಗೆ ಸೌಕರ್ಯವಿಲ್ಲದೆ ಅಸೌಕರ್ಯವಾಗಿದೆ. ಆದಕಾರಣ ಇದರಲ್ಲಿ ಮಾರ್ಪಾಟು ಆಗಬೇಕು. ಸಕಾಲದಲ್ಲಿ ಬಸ್ಸುಗಳನ್ನು ಹೊರಡಿಸಬೇಕು. ಸೂಕ್ತ ಕ್ರಮ ತೆಗೆದುಕೊಂಡರೆ ಜನರಿಗೆ ಉಪಕಾರವಾಗುತ್ತದೆ.

ಕೈಗಾರಿಕೆ ಬಗ್ಗೆ ಮಾನ್ಯ ಮಿತ್ರರಾದ ಅಡಿಗ ಅವರು ಎಲ್ಲ ಹೇಳಿದರು. ದೇಶದ ಪ್ರಗತಿಯ ಲಕ್ಷಣವೇ ಕೈಗಾರಿಕೆಗಳ ಬೆಳವಣಿಗೆ. ಕೈಗಾರಿಕೆಗಳನ್ನು ದೇಶದಲ್ಲಿ ಸ್ಥಾಪನೆ ಮಾಡಿರುವುದು ಜನಗಳಿಗೆ ಉದ್ಯೋಗ ಕೊಡುವುದಕ್ಕೆ. ಕೈಗಾರಿಕೀಕರಣವಾಗದೆ ಇದ್ದರೆ ಇತರ ರಾಷ್ಟ್ರಗಳೊಂದಿಗೆ ಹೈಪೋಟಿ ಮಾಡಿ ಉಳಿಯುವುದಕ್ಕಾಗುವುದಿಲ್ಲ. ಕೆಲವು ಸಂಸ್ಥೆಗಳಲ್ಲಿ ಎಂದರೆ, ನಾನು ಮುಖ್ಯವಾಗಿ ರೇಷ್ಮೆ ಕೈಗಾರಿಕೆಯ ವಿಷಯವಾಗಿ ಹೇಳುತ್ತಿದ್ದೇನೆ. ರೇಷ್ಮೆ ಕೈಗಾರಿಕೆಗಳನ್ನು ತೆಗೆದುಕೊಂಡರೆ ಕನಕಪುರ ಸಿಲ್ಕ್ ಫಿಲೇಚರ್, ಟಿ. ನರಸೀಪುರ ಸಿಲ್ಕ್ ಫಿಲೇಚರ್, ಮೈಸೂರು ಸಿಲ್ಕ್ ಫಿಲೇಚರ್ ಇವುಗಳಲ್ಲಿ ಹತ್ತು ವರ್ಷಗಳಲ್ಲಿ ಒಂದೂವರೆ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳುತ್ತಾರೆ. ನಷ್ಟವಾಗಿದ್ದರೂ ಕೂಡ ಅದನ್ನು ಏಕೆ ಸರ್ಕಾರದವರು ನಡೆಸಬೇಕು ಎನ್ನುವ ಟೀಕೆ ಬರುವುದು ಸಹಜ. ನಾನು ಹೇಳುವುದೇನೆಂದರೆ, ಒಂದೂವರೆ ಕೋಟಿ ರೂಪಾಯಿ ನಷ್ಟವಾಗಿದ್ದರೂ 15 ಲಕ್ಷ ರೂಪಾಯಿ ಮಾತ್ರ ಅದರಿಂದ ನಷ್ಟವಾಗಿದೆ ಎಂಬ ಅಂದಾಜು ಮಾಡಿಕೊಳ್ಳಬೇಕು. ಚನ್ನಪಟ್ಟಣ, ರಾಮನಗರ, ಕನಕಪುರ, ಮಾಗಡಿ ಈ ಪ್ರದೇಶಗಳಲ್ಲಿರುವ ರೇಷ್ಮೆ ವ್ಯವಸಾಯ ಮತ್ತು ಅದನ್ನು ಅವಲಂಬಿಸಿರುವ ಜನರ ಲೆಕ್ಕವನ್ನು ತೆಗೆದುಕೊಂಡರೆ ಈ ರೀತಿ ಹೇಳಬೇಕಾಗುತ್ತದೆ. ಒಂದು ಸಾವಿರ ಜನಗಳಿಗೆ ಉದ್ಯೋಗವನ್ನು ಕೊಡಬೇಕಾದರೆ ಹತ್ತಾರು ಕೋಟಿ ರೂಪಾಯಿ ಖರ್ಚು ಮಾಡಿ ನಷ್ಟಪಡುತ್ತಿರುವ ಕಾಲದಲ್ಲಿ, ಸರ್ಕಾರದವರು ಏನೂ ಹಣವನ್ನು ವಿನಿಯೋಗ ಮಾಡದೆ ಇದ್ದರೂ ಕೂಡ ರೇಷ್ಮೆ ಉದ್ಯಮದಲ್ಲಿ ಸುಮಾರು 25 ಸಾವಿರ ಕುಟುಂಬದವರು ತೊಡಗಿದ್ದಾರೆ ಈ ನಾಲ್ಕು ತಾಲ್ಲೂಕುಗಳಲ್ಲಿ. ಯಾರು ಬೇಕಾದರೂ ಸ್ಟ್ಯಾಟಿಸ್ಟಿಕ್ಸ್ ತೆಗೆದುಕೊಳ್ಳಬಹುದು. 10 ವರ್ಷದ ಹಿಂದೆ ಇದ್ದುದಕ್ಕಿಂತ ನಾಲ್ಕು ಪಟ್ಟು ರೇಷ್ಮೆ ಬೆಳೆಯುವವರ ಸಂಖ್ಯೆ ಜಾಸ್ತಿಯಾಗಿದೆ. ಅವರು ಉತ್ಪಾದನೆ ಮಾಡುವ ರೇಷ್ಮೆ ಖರ್ಚಾಗಬೇಕಾದರೆ ರೇಷ್ಮೆ ಕಾರ್ಖಾನೆಗಳನ್ನು ನಡೆಸಲೇ

ಬೇಕು. ರೇಷ್ಮೆ ಉದ್ಯಮದಲ್ಲಿ ತೊಡಗಿರುವ ಜನರು ಆಹಾರ ಪರಿಸ್ಥಿತಿ ಕಷ್ಟವಾಗಿರುವ ಪರಿಸ್ಥಿತಿಯಲ್ಲಿಯೂ ಆಹಾರ ಪದಾರ್ಥಗಳನ್ನು ಬೆಳೆಯದೆ ಇದ್ದರೂ ಅನೇಕ ಪೇರೆ ದುಡ್ಡನ್ನು ಸಂಪಾದನೆ ಮಾಡುವುದರಿಂದ ನಮ್ಮ ಧಿಯ ಜೀವನವನ್ನು ನಡೆಸುತ್ತ ಎರಡು ಹೊತ್ತು ಊಟ ಮಾಡತಕ್ಕ ಸ್ಥಿತಿಯಲ್ಲಿದ್ದಾರೆ. ಈ ಕೈಗಾರಿಕೆಯಲ್ಲಿ ನಷ್ಟವಾಗುತ್ತದೆ ಎಂದು ಅದನ್ನು ಮುಚ್ಚಿದರೆ 1,800 ಜನರಿಗೆ ಕೆಲಸವಿಲ್ಲದೆ ಹೋಗುತ್ತದೆ ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಳ್ಳುವುದಕ್ಕಿಂತ 25 ಸಾವಿರ ಕುಟುಂಬಗಳಿಗೆ ಮುಂದಿನ ಆಗುಹೋಗುಗಳೇನು, ಅವರ ಸ್ಥಿತಿ ಏನಾಗಬೇಕು, ಎಂದೂ ಯೋಚನೆ ಮಾಡಬೇಕು.

ರೇಷ್ಮೆ ಗೂಡನ್ನು ಬೆಳೆಯುವವರು ಇಂಥ ಕಡೆಗೆ ಹೋಗಿ ಮಾರಬೇಕೆಂಬ ನಿಯಮವನ್ನು ಮಾಡಿ, ಶೇರ್ವಾನ ಕೊಡತಕ್ಕ ಕಾನೂನನ್ನು ಮಾಡಿದ್ದರೂ ಅದನ್ನು ಜಾರಿಗೆ ಕೊಟ್ಟಿಲ್ಲ. ಸರ್ಕಾರದವರೇ ಹೋಗಿ ಕೊಂಡುಕೊಳ್ಳಬೇಕಾಗಿದ್ದರೆ ಈಗಿರುವ ಕಾನೂನನ್ನು ಜಾರಿಗೆ ತಂದು ಅದರಂತೆ ಸರ್ಕಾರದವರು ಹೇಳುವ ಕಡೆ ಎಲ್ಲರೂ ಗೂಡು ತೆಗೆದುಕೊಂಡು ಹೋಗಿ ಮಾರಬೇಕು. ಆಗ ಸರ್ಕಾರದವರು ಎಷ್ಟು ಬೇಕೋ ಅಷ್ಟನ್ನು ನ್ಯಾಯವಾದ ಬೆಲೆಗೆ ತಗೆದುಕೊಳ್ಳುವುದಕ್ಕಾಗುತ್ತದೆ. ಈ ವ್ಯಾಪಾರ ಇನ್ನೂ ಸರ್ಕಾರದ ಕೈಗೆ ಬಂದಿಲ್ಲ. ಅದು ಬೇರೆಯವರ ಕೈಯಲ್ಲಿಯೇ ಇರುವುದರಿಂದ ಧಾರಣೆವಾಸಿಗಳು ಏರುಪೇರಾಗಿ ಒಂದೊಂದು ಸಲ ಕನಸಿನಲ್ಲಿಯೂ ಕಾಣದಂಥ ಬೆಲೆಗಳು ನಮಗೆ ಬರುತ್ತವೆ. ರೇಟುಗಳ ದೃಷ್ಟಿಯಿಂದ ನೋಡಿದರೆ ಹೆಚ್ಚು ಬೆಲೆಗಳು ಇರುವಾಗ ಒಂದು ಎಕರೆಗೆ ನಾಲ್ಕು ಸಾವಿರ ರೂಪಾಯಿ ಬರುತ್ತದೆ. ಆವಾಗ ರೇಷ್ಮೆಗೂಡಿನ ಬೆಲೆಯೂ ಜಾಸ್ತಿಯಾಗುತ್ತದೆ. ಗೂಡಿನ ಬೆಲೆ ಜಾಸ್ತಿಯಾದರೆ ಉತ್ಪನ್ನದ ಖರ್ಚು ಜಾಸ್ತಿಯಾಗಿ ಜಪಾನ್ ದೇಶದಿಂದ ಬರತಕ್ಕ ರೇಷ್ಮೆಯೊಡನೆ ಪೈಪೋಟಿ ಮಾಡಲು ಆಗುವುದಿಲ್ಲ. ಜಪಾನ್ ದೇಶದ ರೇಷ್ಮೆ ದರ್ಜೆಯಲ್ಲಿಯೂ ಉತ್ತಮವಾಗಿದ್ದು ಕಡಮೆ ಬೆಲೆಗೆ ಸಿಕ್ಕುತ್ತದೆ.

ಶ್ರೀ ಕೆ. ಟಿ. ಶಾಮಯ್ಯಗೌಡ (ಸ್ಥಾನೀಯ ವ್ಯಾಧೀಕಾರೀ ಕ್ಷೇತ್ರ).—ರೇಷ್ಮೆ ಕೈಗಾರಿಕೆಯಲ್ಲಿ ಎಷ್ಟು ದಿವಸ ಈ ತರಹ ನಷ್ಟವನ್ನು ಸಹಿಸಬೇಕು, ಅದರಿಂದ ಏನಾದರೂ ಪ್ರಯೋಜನ ಉಂಟೇ! ಆ ಉದ್ಯಮವನ್ನು ಲಾಭದಾಯಕವಾಗಿ ಮಾಡುವ ಸಲಹೆಗಳು ಏನಾದರೂ ಇದ್ದರೆ ಹೇಳುತ್ತೀರಾ?

ಶ್ರೀ ಕೆ. ಸುಬ್ಬರಾವ್.—ಅದನ್ನು ಲಾಭದಾಯಕವಾಗಿ ಮಾಡತಕ್ಕ ಯೋಜನೆ ಅಷ್ಟೇನೂ ಕಷ್ಟವಲ್ಲ. ಸಾಧಾರಣವಾಗಿ ನಮ್ಮಲ್ಲಿ ವಿದ್ಯಾವಂತರಾದ ತರುಣರು ಸರ್ಕಾರಿ ಕೆಲಸಗಳಿಗೆ ಹಾತೊರೆಯುವುದನ್ನು ಬಿಟ್ಟು ಆಯಾ ಊರುಗಳಲ್ಲಿಯೇ ಇದ್ದುಕೊಂಡು ರೇಷ್ಮೆ ಬಿಚ್ಚುವ ಕೆಲಸವನ್ನು ಕೈಕೊಂಡರೆ ಐದು ಸಾವಿರ ರೂಪಾಯಿ ವೆಚ್ಚಮಾಡಿ 500 ರೂಪಾಯಿ ಸಂಪಾದನೆ ಮಾಡಬಹುದು ಎನ್ನುವ ಗ್ಯಾರಂಟಿಯನ್ನು ನನ್ನ ಮಿತ್ರರಿಗೆ ನಾನು ಕೊಡುತ್ತೇನೆ. ಇದರಿಂದ ಉತ್ಪಾದನೆ ಮಾಡತಕ್ಕ ಬೆಲೆ ಕಡಮೆಯಾಗುತ್ತದೆ. ರೇಷ್ಮೆ ಬೆಳೆ ಬೆಳೆಯುವವರ ಸಂಖ್ಯೆ ಜಾಸ್ತಿಯಾಗಿ, ರೇಷ್ಮೆ ತೆಗೆದುಕೊಳ್ಳುವವರ ಸಂಖ್ಯೆಯೂ ಜಾಸ್ತಿಯಾಗಿ, ಹೊರಗಿನಿಂದ ಬರುವ ರೇಷ್ಮೆಯಿಂದ ರಕ್ಷಣೆಯನ್ನು ಟ್ಯಾರಿಫ್ ಬೋರ್ಡಿನವರು ಕೊಟ್ಟಿದ್ದರಿಂದ ಬೆಲೆಗಳು ಜಾಸ್ತಿಯಾಗಿವೆ.

5-15 P.M.

ಕೇವಲ ರಾಮನಗರಕ್ಕೆ ಬಂದು ನೋಡುವುದಾದರೆ 800 ಜನ, ಸಾವಿರ ಜನ ರೇಷ್ಮೆ ಬಿಚ್ಚತಕ್ಕ ಉದ್ಯಮವನ್ನು ಮಾಡುತ್ತಿದ್ದಾರೆ. ರೇಷ್ಮೆ ಬಿಚ್ಚತಕ್ಕದ್ದರಲ್ಲಿ ಸ್ವಲ್ಪ ಕಚ್ಚಾಮಾಲು ಆಗುತ್ತದೆ. ಅದಕ್ಕೆ ಮಾರ್ಕೆಟ್ಟಿನಲ್ಲಿ ಸಾಕಷ್ಟು ಬೆಲೆ ಬರುವುದಿಲ್ಲ. ಜಪಾನಿನವರು ಮಾಡಿರತಕ್ಕ ಯಂತ್ರವನ್ನು ಇಟ್ಟುಕೊಂಡರೆ ಒಬ್ಬ ಮನುಷ್ಯ ನಾಲ್ಕು ಯಂತ್ರಗಳನ್ನು ಒಟ್ಟಿಗೇ ಬಿಡಬಹುದು. ಹೆಚ್ಚು ಜನರಿಗೆ ಕೆಲಸಗಳನ್ನು ಹೇಳುವುದಕ್ಕೆ ನನಗೆ ಕಾಲಾವಕಾಶವಿಲ್ಲ. ವಿದ್ಯಾವಂತ ತರುಣರು ಇದನ್ನು ಒಂದು ವೃತ್ತಿಯಾಗಿ ಕೈಕೊಂಡರೆ ಅವರ ಜೀವನ ಮಟ್ಟ ಉತ್ತಮವಾಗುತ್ತದೆ ಮತ್ತು ದೇಶಸೇವೆಯನ್ನೂ ಮಾಡಿದ ಹಾಗೆ ಆಗುತ್ತದೆ. ಇರಾಖೆಯವರು ಐದು ಸಾವಿರ ರೂಪಾಯಿವರೆಗೆ ಈ ಕೆಲಸದಲ್ಲಿ ಸಾಲ ಕೊಡುವ ವ್ಯವಸ್ಥೆಯನ್ನು ಮಾಡಿ, ವಿದ್ಯಾವಂತರಿಗೆ ರೇಷ್ಮೆ ಬಿಚ್ಚತಕ್ಕ ಉದ್ಯಮದಲ್ಲಿ ತರಬೇತಿಯನ್ನು ಕೊಟ್ಟು, ತರಬೇತಿ ಪಡೆದವರು ಆ ವೃತ್ತಿಯನ್ನು ಕೈಕೊಂಡರೆ ನಿಜವಾಗಿಯೂ ಎಂದೆದಿಗೂ ಇದರಲ್ಲಿ ನಷ್ಟವಾಗುವುದಿಲ್ಲ. ಇನ್ನೂ ಲಕ್ಷಾಂತರ ಎಕರೆಯಲ್ಲಿ ರೇಷ್ಮೆಯನ್ನು ಇಟ್ಟರೂ ಕೂಡ ನಮಗೆ ಅದರಿಂದ ತೊಂದರೆ ಆಗುವುದಿಲ್ಲ. ಮಾನ್ಯ ಮಿತ್ರರು ಒಂದು ದಿನ ದಯಮಾಡಿ ರಾಮನಗರಕ್ಕೆ ಬಂದರೆ ಎಲ್ಲವನ್ನೂ ಕೂಡ ಪ್ರತ್ಯಕ್ಷವಾಗಿ ತೋರಿಸುತ್ತೇನೆ.

(ಶ್ರೀ ಕೆ. ಸುಬ್ಬರಾವ್)

ಇರಾಖೆಯವರಲ್ಲಿ ಕೂಡ ಕೆಲವು ದೃಷ್ಟಿಯಿಂದ ಸುಧಾರಣೆ ಆಗಬೇಕಾಗಿದೆ. ಇರಾಖೆಯವರ ಮೇಲ್ವಿಚಾರಣೆಯಲ್ಲಿ ಒಳ್ಳೆಯ ಬತ್ತನೆ ಬೀಜವನ್ನು ಒದಗಿಸಿಕೊಟ್ಟರೆ ಮುಂದೆ ಬರುವ ರೇಷ್ಮೆ ಚೆನ್ನಾಗಿ ಬರುತ್ತದೆ. ಅನೇಕ ಸಂದರ್ಭಗಳಲ್ಲಿ ಪರೀಕ್ಷೆ ನಡೆಸದೆ ಇರುವ ಮೊಟ್ಟೆಗಳನ್ನು ಕೊಡುವು ರಿಂದ ನಷ್ಟವಾಗುತ್ತದೆ. ಇದರ ಕಡೆಗೆ ಸರ್ಕಾರದವರು ಮತ್ತು ಇರಾಖೆಯವರು ಗಮನ ಕೊಡಬೇಕು.

ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಮೂಲಧನವಾಗಿ ಕೊಟ್ಟು ಸಾವಿರಾರು ಜನರಿಗೆ ಉದ್ಯೋಗವನ್ನು ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಸರ್ಕಾರದವರು ಸ್ವಲ್ಪ ಸಹಾಯ ವನ್ನು ರೇಷ್ಮೆ ಉದ್ಯಮದವರಿಗೆ ಕೊಟ್ಟರೆ ಹತ್ತು ಲಕ್ಷ ಕುಟುಂಬ ಈ ವೃತ್ತಿಯನ್ನು ಕೈಕೊಂಡು ಗೃಹ ಕೈಗಾರಿಕೆಯಂತೆ ನಡೆಸುತ್ತ ಇರುವವರಿಗೆ ಅನುಕೂಲವಾಗಿ ಹೆಚ್ಚು ಪ್ರತಿಫಲ ಬರುತ್ತದೆ, ದೇಶದ ಉತ್ಪನ್ನ ಜಾಸ್ತಿಯಾಗುತ್ತದೆ. ರೈತನ ಉತ್ಪನ್ನ ಜಾಸ್ತಿಯಾಗುತ್ತದೆ, ಅವನ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ. ಸರ್ಕಾರದವರು ಯಾವ ಸಹಾಯವನ್ನು ಕೊಟ್ಟರೂ ಕೂಡ ರೈತನಿಗೆ ಕಡಿಮೆ ಸಹಾಯ ಒದಗುತ್ತಿದೆ. ಹತ್ತು ಲಕ್ಷ ಜನರಲ್ಲಿ ಸಾವಿರ ಜನ ಅದರ ಉಪಯೋಗ ಪಡೆದಿದ್ದಾರೋ ಇಲ್ಲವೋ ಗೊತ್ತಿಲ್ಲ. ರಾಮನಗರ ಸಬ್ ಡಿವಿಜನ್ನಿಗೆ ಮುಂಜೂರು ಮಾಡಿರುವ ಹಣದಲ್ಲಿ ಹತ್ತು ಹನ್ನೆರಡು ಮಂದಿ ಪ್ರಯೋಜನ ಪಡೆದಿದ್ದಾರೆ. ಅತ್ಯುತ್ತಮವಾದ ರೇಷ್ಮೆ ಗೃಹ ಕೈಗಾರಿಕೆ ಯನ್ನು ತೆಗೆದುಕೊಂಡು ಬಂದು ಕೈಗಾರಿಕೆಗಳಲ್ಲಿ ಹಾಕಿದ್ದಾರೆ. ಕೈಗಾರಿಕೆಗಳಿಗೆ 12 ಕೋಟಿ 38 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಕೈಗಾರಿಕೆಗಳಲ್ಲಿ ರೇಷ್ಮೆ ಕೈಗಾರಿಕೆಯನ್ನು ಕೆಲಸಕ್ಕೆ ಬಾರದ ಕೈಗಾರಿಕೆ ಎಂದು ಕಡೆಯಲ್ಲಿ ಸೇರಿಸಬೇಕು ಎಂದು ಹಾಕಿದ್ದಾರೆ. ಇದನ್ನು ನೋಡಿ ನನಗೆ ಬಹಳ ವ್ಯಸನವಾಯಿತು. ಅತ್ಯುತ್ತಮವಾದ ಗೃಹ ಕೈಗಾರಿಕೆ. ಇದಕ್ಕೆ ಎಲ್ಲ ವಿಧವಾದ ಪ್ರೋತ್ಸಾಹವನ್ನೂ ಕೊಡಬೇಕು. ಈಗ ಕೊಟ್ಟಿರುವುದು ಏನೇನೂ ಸಾಲದು. ಇರಾಖೆಯವರೂ ಮತ್ತು ಸರಕಾರದವರೂ ರೇಷ್ಮೆ ಕೈಗಾರಿಕೆಗೆ ಸಾಕಷ್ಟು ಉತ್ತೇಜನವನ್ನು ಕೊಡಬೇಕೆಂದು ನಲಹೆ ಮಾಡುತ್ತೇನೆ.

ಇನ್ನು ನೀರಾವರಿಗೆ ಕೊಟ್ಟಿರುವ ಹಣವನ್ನು ನೋಡಿದರೆ ಅದರಲ್ಲಿ ಅರ್ಕಾವತಿ ಪ್ರಾಜೆಕ್ಟ್ ಎಂದು ತೋರಿಸಿ ಅದಕ್ಕೆ ಹೋದ ವರ್ಷವೂ ಸೊನ್ನೆ, ಆಚೆ ವರ್ಷವೂ ಸೊನ್ನೆ, ಈ ವರ್ಷವೂ ಸೊನ್ನೆ, ಏನೂ ತೋಟ್ಟಿಲ್ಲ. ಇಂಥದ್ದನ್ನು ಏಕೆ ಸೇರಿಸಬೇಕಾಗಿತ್ತು ಎನ್ನುವುದು ಗೊತ್ತಿಲ್ಲ. ಈ ವಿಷಯದಲ್ಲಿ ನಮ್ಮ ಸಬ್‌ಡಿವಿಜನ್ ಪರವಾಗಿ ನಾನು ರೋಕೋಪಯೋಗಿ ಇರಾಖೆಯ ಮಂತ್ರಿಗಳಿಗೆ ವಿಜ್ಞಾಪನೆ ಮಾಡಿಕೊಳ್ಳುವುದು ಏನೆಂದರೆ, ಪದೇ ಪದೇ ಅರ್ಕಾವತಿ ಯೋಜನೆ, ಮಂಚನಬೆಲೆ ಯೋಜನೆ ಇವೆರಡನ್ನೂ ಮಾಡಿ ಕೊಟ್ಟರೆ ಆ ಸಬ್ ಡಿವಿಜನ್ ಆಕಾರದಲ್ಲಿ ಸ್ವಪರಿಪೂರ್ಣವಾಗುತ್ತದೆ. ಆಹಾರಕ್ಕೆ ಸರ್ಕಾರವನ್ನು ಅವಲಂಬನೆ ಮಾಡುವುದಿಲ್ಲ, ನಾವು ಬೆಳೆದು ಸರ್ಕಾರಕ್ಕೂ ಕೊಡುತ್ತೇವೆಂದು ಕೇಳಿಕೊಳ್ಳುತ್ತಿದ್ದೇವೆ. ವ್ಯವಸಾಯಕ್ಕೆ ಬೇಕಾದಷ್ಟು ಸಹಾಯ ಮಾಡುತ್ತೇವೆಂದು ಬಾಯಿಲ್ಲಿ ಹೇಳುತ್ತಾರೆ. ಇವರು ಹೇಳುವುದು ಯಾವ ರೀತಿ ಇದೆ ಎಂದು ನೋಡುವುದಾದರೆ, 'ಗಾಣಗಿತ್ತಿ ಅಯ್ಯೋ ಎಂದರೆ ನೆತ್ತಿ ತಣ್ಣಗಾಯಿತೇ' ಎಂದು ಹೇಳುವಂತಾಗಿದೆ. ಈ ಯೋಜನೆಗಳನ್ನು ತೆಗೆದುಕೊಂಡು ಮಾಡಿಸುತ್ತೇವೆ, ಮಾಡಿಸುತ್ತೇವೆ ಎಂದು ಹೇಳುವುದರಿಂದ ಏನೂ ಪ್ರಯೋಜನವಿಲ್ಲ. ಸರ್ಕಾರ ಇತರ ಕೆಲಸಗಳಿಗೆ ಒದಗಿಸುವ ಹಾಗೆ ಈ ಯೋಜನೆಗಳಿಗೂ ದುಡ್ಡನ್ನು ಒದಗಿಸಿ ಬೇಗ ಕಾರ್ಯವನ್ನು ತೆಗೆದುಕೊಳ್ಳಬೇಕು. ಅದಿಲ್ಲದೆ ಇದ್ದರೆ 'ನಂದೋ ರಾಜ ಭವಿಷ್ಯತ್' ಎನ್ನುವಂತಾಗುತ್ತದೆ. ಪೊನ್ನೆತಾನೆ ಡಾ॥ ಕೆ. ಎಲ್. ರಾವ್, ಪಾಟೀಲರು ಬಂದು ನೋಡಿದರು, ಬಹಳ ಚೆನ್ನಾಗಿದೆ, 3 ತಿಂಗಳಲ್ಲಿ ಮುಂಜೂರು ಮಾಡುತ್ತೇವೆ ಎಂದು ಹೇಳಿದ್ದರು, ಪೆಪ್ಪಂಬರಿಯಿಂದ ಇಲ್ಲಿಗೆ 6 ತಿಂಗಳಾದರೂ ಏನಾಗಿದೆಯೋ ಏನೋ ಅರ್ಥವಾಗುವುದಿಲ್ಲ. ಪದೇ ಪದೇ ಕೇಳುತ್ತಲೇ ಇದ್ದೇವೆ. ಅದರೆ ನೋಡೋಣ ಎಂದು ಹೇಳುವುದರಲ್ಲೇ ಕಾಲ ತಳ್ಳುತ್ತಿದ್ದಾರೆ. ಕೊನೆಗೆ ವಾಚಾ ತ್ಯಪ್ತಿಯಿಂದಲೇ ಸಮಾಧಾನಪಟ್ಟುಕೊಳ್ಳಬೇಕೋ ಏನೋ ತಿಳಿಯದು. ಈ ಭಯವಿದೆ. ಅರ್ಕಾವತಿ ಯೋಜನೆ ವಿಚಾರ ಇಷ್ಟೆ. ಎರಡು ಕಡೆ ನೀರು ಕೇಳಿರಿಸಿದರೆ ಪೂರ್ಣ ಸಬ್‌ಡಿವಿಜನ್ನಿಗೇ ಅನು ಕೂಲವಾಗುತ್ತದೆ, ರಾಮನಗರ, ಚನ್ನಪಟ್ಟಣ, ಮಾಗಡಿ ಮುಂತಾದ ತಾಲ್ಲೂಕುಗಳಿಗೆ ಸಹಾಯ ವಾಗುತ್ತದೆ. ಇದನ್ನು ಸದೇ ಪದೇ ಹೇಳಿದರೂ ಕೂಡ ಗಮನ ಕೊಡಲಿರುವುದನ್ನು ನೋಡಿ ವಿಷಾದವಾಗುತ್ತಿದೆ. ಇದಕ್ಕೆ ಒದ್ಯ ಗಮನ ಕೊಡಬೇಕು.

ವ್ಯವಸಾಯದ ಅಭಿವೃದ್ಧಿಗೆ ಬೇಕಾದಷ್ಟು ಸಹಾಯ ಮಾಡುತ್ತಿದ್ದಾರೆ, ಅದಕ್ಕೆ ನಾವು ಕೃತಜ್ಞರು, ಅಭಿನಂದನೆ ಸಲ್ಲಿಸಬೇಕಾಗಿದೆ. ಅದರೆ ದೇವರು ವರ ಕೊಟ್ಟರೆ ಪೂಜಾರಿ ವರ ಕೊಡು

ವುದಿಲ್ಲ, ಹೀಗಾಗಿದೆ. ಬೇಕಾದಷ್ಟು ಹಣ ಒದಗಿಸಿದ್ದೇವೆ, ತೆಗೆದುಕೊಳ್ಳಿ ಎಂದು ಹೇಳುತ್ತಾರೆ, ಕೇಳಿದರೆ ಒಂದು ಆಫೀಸಿನಿಂದ ಬೇರೆ ಆಫೀಸಿಗೆ ಕಳುಹಿಸುತ್ತಾರೆ. ಹೀಗೆ ಬೇರೆ ಬೇರೆ ಆಫೀಸುಗಳಿಗೆ ಅಲೆಯುವುದರಲ್ಲೇ ಕಾಲಹರಣವಾಗುತ್ತದೆ, ಜಾಗ್ರತೆ ದೊರೆಯುವುದಿಲ್ಲ. ಹೀಗಾಗಿ ಈ ಸ್ವಾತಂತ್ರ್ಯ ಯುಗದಲ್ಲಿ ನಾವು ಮನುಷ್ಯರ ಹಾಗೆ ವರ್ತಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನೊಂದು ವಿಚಾರ. ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿ ಬೇಕಾದಷ್ಟು ಉತ್ಪತ್ತಿ ಆಗುತ್ತಿದೆ. ಅದನ್ನು ಹೊರ ದೇಶದವರಿಗೆ ಕೊಡುತ್ತಿದ್ದಾರೆ, ಮದ್ರಾಸು, ಆಂಧ್ರ ಕೇರಳ ಮುಂತಾದ ದೇಶಗಳಿಗೆ ಸರಬರಾಯಿ ಮಾಡುತ್ತಿದ್ದಾರೆ. ಇದನ್ನು ನೋಡಿದರೆ 'ಮನೆಗೆ ಮಾರಿ, ಪರರಿಗುಪಕಾರಿ' ಎಂದು ಹೇಳುವ ಗಾದೆ ಜ್ಞಾಪಕಕ್ಕೆ ಬರುತ್ತದೆ. ನಮಗೆ ಸರಬರಾಯಿ ಮಾಡುವುದಕ್ಕೆ ದರ ಇಳಿಸಿಲ್ಲ, ದರ ಇಳಿಸಿದರೆ ನೀರಾವರಿಗೆ ಬಹಳ ಜನರು ತೆಗೆದುಕೊಳ್ಳಬಹುದು. ಮದ್ರಾಸಿಗೆ ಮತ್ತು ಇತರ ಕಡೆಗಳಿಗೆ ನಾಲ್ಕೂವರೆ ಪೈಸೆಯಂತೆ ಕೊಡುವಾಗ ನಮಗೆ 6 ಪೈಸೆಯಂತೆ ನಮ್ಮ ದೇಶದಲ್ಲೇ ಉತ್ಪತ್ತಿಯಾಗುವುದನ್ನು ಹಂಚುತ್ತಿದ್ದಾರೆ. ಹೊರಗಿನವರು ಹೆಚ್ಚು ತೆಗೆದುಕೊಳ್ಳುತ್ತಾರೆ, ಆದುದರಿಂದ ಅವರಿಗೆ ಕಡಮೆ ದರದಲ್ಲಿ ಕೊಡುತ್ತೇವೆ ಎಂದು ಹೇಳಬಹುದು. ನಾವೂ ಕೂಡ ಕಡಮೆ ದರದಲ್ಲಿ ಕೊಟ್ಟರೆ ಹೆಚ್ಚಾಗಿ ತೆಗೆದುಕೊಳ್ಳಬಹುದು. ಒಬ್ಬೊಬ್ಬ ಒಂದೊಂದು ಪಂಪನ್ನು ತೆಗೆದುಕೊಂಡರೆ ಕಡೆಯ ಪಕ್ಷ 1 ಲಕ್ಷ 20 ಸಾವಿರ ಪಂಪುಗಳೇನು ಬೇಕು ಅದಕ್ಕೆ, ಹೆಚ್ಚಿಗೆ ಪವರ್ ಉಪಯೋಗವಾಗೇ ಆಗುತ್ತದೆ. ಇಷ್ಟು ಜನರು ಹೆಚ್ಚು ವಿದ್ಯುಚ್ಛಕ್ತಿ ಬಳಸುತ್ತಾರೆ. ಹಾಗಿರುವಾಗ ನಮಗೇಕೆ ಹೆಚ್ಚು ಥಾರ್ಜು ಮಾಡುವುದು? ಇದು ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎಂಬ ನೀತಿಯಂತಿದೆ. ಇದು ಮೈಸೂರಿನ ಪ್ರಜೆಗಳಿಗೆ ಮಾಡುವ ಉಪಕಾರವೇ? ಗೋದಾವರಿ ನೀರಿನ ಹಂಚಿಕೆ ವಿಚಾರದಲ್ಲಿ ನಮ್ಮ ಬಗ್ಗೆ ಸಹಾನುಭೂತಿ ತೋರಿಸದಿರುವವರಿಗೆ ಉಪಕಾರ ಸ್ಮರಣೆ ಮಾಡದಿರುವವರಿಗೆ ನೀವು ಉಪಕಾರ ಮಾಡಲು ಹೋಗುತ್ತೀರಿ. ನಮಗಾಗುವ ಅನುಕೂಲತೆಗಳಿಗೆ ಅಡ್ಡಿ ತರುವವರಿಗೆ ನೀವೇಕೆ ಕಡಮೆ ದರದಲ್ಲಿ ಒದಗಿಸುವುದು? ನಿಮ್ಮ ದೃಷ್ಟಿಯಲ್ಲಿ ಬಹಳ ಬದಲಾವಣೆ ಆಗಬೇಕು. ಹೆಚ್ಚು ಬೆಳೆ ಬೆಳೆಯಬೇಕೆಂದು ಹೇಳುವಾಗ ರೈತರಿಗೆ ಇನ್ನೂ ಹೆಚ್ಚು ಉತ್ತೇಜನ ಕೊಟ್ಟರೆ ಅವರು ಹೆಚ್ಚಾಗಿ ಬೆಳೆಯಬಹುದು.

ಇನ್ನೊಂದು ವಾದ ಬಂದಿದೆ, ರೈತರಿಗೆ ಉತ್ತೇಜನ ಕೊಡುವುದಕ್ಕಾಗಿ 5 ಎಕರೆಗಿಂತ ಕಡಮೆ ಇರುವವರಿಗೆ ಕಂದಾಯ ಮಾಫಿ ಮಾಡಬೇಕು ಎಂಬುದು. ಕಂದಾಯ ಮಾಫಿ ಮಾಡುವುದಾಗಿ ಹೇಳಿದ್ದರು, ಈಗ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ ಎಂಬ ಟೀಕೆ ಬೇರೆ ಇದೆ. ಈ ಟೀಕೆಯಲ್ಲಿ ಅರ್ಥವಿಲ್ಲ, ನೀತಿಯನ್ನು ಸಮಯಕ್ಕೆ ತಕ್ಕಂತೆ ಬದಲಾಯಿಸಬೇಕಾದ ಪರಿಸ್ಥಿತಿ ಬರುತ್ತದೆ. ಹಿಂದೆ ವಜಾ ಮಾಡುವುದಾಗಿ ಹೇಳಿರಬಹುದು. ಆದರೆ ಒಂದೆರಡೆಕರೆ ಇರುವವರಿಗೆ ಕಂದಾಯ ವಜಾಮಾಡಿದರೆ ರೈತರು ಅದಕ್ಕೆ ಕೃತಜ್ಞರಾಗಿರುವುದಿಲ್ಲ, ಉಪಕಾರ ಮಾಡಿದರೆಂದು ಭಾವಿಸುವುದಿಲ್ಲ. ಕಂದಾಯ ತೆಗೆದುಕೊಂಡು ಇತರ ಅನುಕೂಲಗಳನ್ನು ಒದಗಿಸಲು, ವಿದ್ಯುತ್ತಿನ ದರ ಕಡಮೆ ಮಾಡಲು, ಅದು ಸುಲಭವಾಗಿ ಸಿಕ್ಕುವಂತೆ ಮಾಡಲು. ಆಗ ಉಪಕಾರವಾಯಿತೆಂದು ಭಾವಿಸುತ್ತಾರೆ. ಅದನ್ನು ಬಿಟ್ಟು ರೈತರಿಗೆ ಕಂದಾಯ ಕಡಿಮೆ ಮಾಡಿದರೆ, ವಜಾ ಮಾಡಿದರೆ ಸಹಾಯವಾಗುವುದಿಲ್ಲ. ಕಂದಾಯವನ್ನೇನೂ ವಜಾ ಮಾಡಬೇಕಾಗಿಲ್ಲ. ಕಂದಾಯ ಹಾಕುವ ಪದ್ಧತಿ ಈಗಿರುವ ಹಾಗೇ ಇರಲಿ, ಆ ಪದ್ಧತಿ ಸೂಕ್ತವಾಗಿದೆ. ಕೆಲವರಿಗೆ ಕಂದಾಯ ವಜಾಮಾಡಿದರೆ ಸಂತೋಷವಾಗಬಹುದು, ಬಹಳ ಮಂದಿಗೆ ಸಂತೋಷವಾಗುವುದಿಲ್ಲ, ಕಂದಾಯ ವಿದ್ದರೆ ಇಂಥ ಜಮೀನು ತಮ್ಮದು, ಕಂದಾಯ ಕೊಟ್ಟಿದ್ದಕ್ಕೆ ದಾಖಲೆಯಿದೆ ಎಂದು ತೋರಿಸಬಹುದು. ಜನರಿಗೆ ಬಿತ್ತನೆ ಕಾಳು, ಹೆಚ್ಚು ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ, ದೀರ್ಘಾವಧಿ ಸಾಲ, ಬಾವಿಗಳಿಗಾಗಿ ಸಾಲ, ಜಮೀನು ಮಟ್ಟ ಮಾಡಲು ಸಾಲ ಮುಂತಾದ್ದನ್ನೆಲ್ಲಾ ಕೊಡುತ್ತಿದ್ದಾರೆ. ಆದರೆ ಹಾಗೆ ಕೊಟ್ಟಿದ್ದು ಸಕಾಲದಲ್ಲಿ ಕೈಗೆ ಸಿಕ್ಕಿ ಅನುಕೂಲವಾಗಬೇಕು. ಲಂಚದ ಹೊರೆ ತಪ್ಪಿ, ಕೊಡುವ ಸಾಲ ಮತ್ತು ಸೌಕರ್ಯ ತೊಂದರೆ ಇಲ್ಲದೆ ಸಕಾಲದಲ್ಲಿ ದೊರೆತರೆ ಬಹಳ ಪ್ರಯೋಜನವಾಗುತ್ತದೆ. ಈ ಕಡೆಗೆ ಗಮನ ಕೊಡಬೇಕು.

ಇನ್ನೊಂದು ವಿಚಾರ, ಸಹಕಾರ ಸಂಘಗಳ ಸಂಬಂಧದಲ್ಲಿ ಹೆಚ್ಚು ಆರೋಪವಿರುವ ತಾಲ್ಲೂಕಿನಿಂದ ನಾನು ಬಂದಿದ್ದೇನೆ. ಇಡೀ ಸಂಸ್ಥಾನದಲ್ಲಿ ನಮ್ಮ ತಾಲ್ಲೂಕಿನ ಮೇಲೆ ಬಹಳ ಅಪವಾದ ವಿದೆ, ಇದಕ್ಕೆ ಕೆಲವು ಕಾರಣಗಳಿವೆ. ಬಹಳ ಮಟ್ಟಿಗೆ ಸಹಕಾರ ಸಂಘಗಳಿಂದ ಫ್ರೀ ಸರ್ವಿಸ್ ಆಗ ಬೇಕೆಂದು ಆಶಿಸುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ರಿಜಿಸ್ಟರಾಗಿರುವುದು 80 ಸೊಸೈಟಿಗಳಿರಬಹುದು. ನಮ್ಮ ಕೇಂದ್ರ ಸೊಸೈಟಿಗೆ ನಾನು ಅಧ್ಯಕ್ಷ. ಬಿಟ್ಟಿ ಕೆಲಸ ಮಾಡಬೇಕು ಎಂದು ಎಲ್ಲರೂ ಬೇಡುತ್ತಾರೆ, ಆದುದರಿಂದ ಸಹಕಾರ ಸಂಘಗಳ ಆಡಳಿತವನ್ನು ಬದಲಾಯಿಸಬೇಕು.

(ಶ್ರೀ ಕೆ. ಸುಬ್ಬರಾವ್)

ಇನ್ನುಮೇಲೆ ಪ್ರತಿಯೊಂದು ಸೊಸೈಟಿಯಲ್ಲೂ ಸಂಬಳ ಪಡೆಯುವ ನೌಕರರನ್ನು ನೇಮಿಸಬೇಕು. ಈಗ ಪ್ರತಿ ಪಂಚಾಯಿತಿಯಲ್ಲೂ ಸಂಬಳ ಕೊಟ್ಟು ಸೆಕ್ರೆಟರಿಯನ್ನಿಟ್ಟಿದ್ದಾರೆ, ಆ ಸೆಕ್ರೆಟರಿಗೇ ಹೆಚ್ಚು ಸಂಬಳ ಕೊಟ್ಟು ಸೊಸೈಟಿಯ ಜವಾಬ್ದಾರಿಯನ್ನೂ ವಹಿಸಬೇಕು. ಆತ ಸರಕಾರದ ಅಧಿಕಾರಿ, ಅವನು ಹಣ ತಿಂದುಹಾಕಿದರೆ ಅವನನ್ನು ಜೈಲಿಗೆ ಕಳಿಸಬಹುದು, ಶಿಕ್ಷೆ ಮಾಡಬಹುದು, ಲೆಕ ಇಡುವ ಯೋಗ್ಯತೆ ಅವನಿಗಿರುತ್ತದೆ. ಹಳ್ಳಿಗಳಲ್ಲಿ ಸೊಸೈಟಿಗಳ ಅಧ್ಯಕ್ಷರು ಮತ್ತು ಸೆಕ್ರೆಟರಿಗಳಾಗ್ಯ ಪವರಿಗೆ ಲೆಕ್ಕವಿಡುವುದಕ್ಕೆ ಬರುವುದಿಲ್ಲ. ಆದುದರಿಂದ ಪಂಚಾಯಿತಿ ಸೆಕ್ರಟರಿಗೆ ಸೊಸೈಟಿ ಕೆಲಸ ವನ್ನು ವಹಿಸುವುದು ಉತ್ತಮ.

ಇತ್ತೀಚೆಗೆ ಸುಪ್ರೀಂ ಕೋರ್ಟಿನಲ್ಲಿ ಒಂದು ತೀರ್ಮಾನವಾಗಿದೆ, ಈಗ ನೇರವಾಗಿ ಕೆಲವು ದೊಡ್ಡ ಹುದ್ದೆಗಳಿಗೆ ಪದವೀಧರರನ್ನು ನೇಮಕಮಾಡುತ್ತಾರೆ, ಸರ್ವಿಸ್ಸಿನಲ್ಲಿರುವವರಿಗೆ, ಎಸ್.ಎಸ್.ಎಲ್.ಸಿ. ಪಾಸು ಮಾಡಿ 30 ವರ್ಷ ಸರ್ವಿಸ್ ಆಗಿರುವವರಿಗೆ ಪ್ರಮೋಷನ್‌ಗೆ ಅವಕಾಶ ಕಡಿಮೆಯಾಗುತ್ತಿದೆ. ಹೊಸದಾಗಿ ನೇಮಕವಾದವರು, ಡೈರೆಕ್ಟ್‌ವಾಗಿ ತೆಗೆದುಕೊಂಡ ಪದವೀಧರರು ಹೆಚ್ಚು ಸರ್ವಿಸ್ ಆದವರ ಮೇಲೆ ಬಂದುಬಿಡುತ್ತಾರೆ. ಆದುದರಿಂದ ಹೆಚ್ಚು ಸರ್ವಿಸ್ ಮಾಡಿದವರಿಗೆ ತೊಂದರೆಯಾಗ ದಂತೆ 50-50 ಬೇಸಿಸ್‌ಮೇಲೆ ಒಬ್ಬರು ಪದವೀಧರರನ್ನು ನೇರವಾಗಿ ಕೆಲಸಕ್ಕೆ ತೆಗೆದುಕೊಂಡರೆ ಸೀನಿಯಾರಿಟಿ ಪ್ರಕಾರ ಸರ್ವಿಸ್ಸಿನಲ್ಲಿರುವ ಒಬ್ಬರನ್ನು ತೆಗೆದುಕೊಳ್ಳಬೇಕು, ಆ ಬಗ್ಗೆ ನಿಯಮವಿದೆ ಹೀಗೆ ಮಾಡಿದರೆ ಸರ್ವಿಸ್ ಆದವರಿಗೆ ಸ್ವಲ್ಪ ಸಮಾಧಾನವಾಗುವುದು, ಅವರು ಪ್ರಮೋಷನ್‌ಗೆ ಹೆಚ್ಚು ಕಾಯಬೇಕಾಗುವುದಿಲ್ಲ. ಇದಕ್ಕೆ ಮಂತ್ರಿಗಳು ಗಮನ ಕೊಡಬೇಕು.

ಶ್ರೀ ಪುಟ್ಟಸ್ವಾಮಿಯವರು ಒಂದು ವರವಿ ಕೊಟ್ಟಿದ್ದಾರೆ, ಸಣ್ಣ ನೌಕರರು ಹೆಚ್ಚು ಸಂಬಳ ಕೇಳಿದರೆ ಕೊಡುವುದಕ್ಕೆ ತಮ್ಮ ಅಭ್ಯಂತರವಿಲ್ಲ ಎಂದು ತಿಳಿಸಿದ್ದಾರೆ. ಹಾಗೆ ಹೇಳಿದರೆ ಹೇಗೆ ? ಸೊಸೈಟಿಯವರು ಹೆಚ್ಚಿಗೆ ಸಂಬಳ ಕೊಡಲು ತಮಗೆ ಯೋಗ್ಯತೆಯಿಲ್ಲ ಎಂದು ಹೇಳುವಾಗ ಹೀಗೆ ಹೇಳಿದರೆ ಹೇಗೆ ! ಸೊಸೈಟಿಯವರು 40-50 ರೂಪಾಯಿ ಕೊಟ್ಟರೆ ಯಾರೂ ಬರುವುದಿಲ್ಲ. ಹೀಗಿರು ವಾಗ, ಸರಕಾರ ಸಹಾಯಮಾಡದಿದ್ದರೆ ಹೇಗೆ ! ಇದನ್ನು ವಿಮರ್ಶೆ ಮಾಡಬೇಕು. ಸೊಸೈಟಿಯಲ್ಲಿ ನಷ್ಟವಾಗುತ್ತಾ ಇದೆ, ಎಲ್ಲೂ ಸರಿಯಾಗಿ ಕೆಲಸ ಆಗುತ್ತಿಲ್ಲ ಎಂದು ಹೇಳಿ ನಿಮ್ಮ ಪಾರ್ಟಿಯಿಂದಲೇ ಅಪವಾದನೆ, ಟೀಕೆ ಬರುತ್ತಾ ಇದೆ ಇದನ್ನು ಯೋಚನೆ ಮಾಡಿದರೆ ನಿಜವಾಗಿಯೂ ಕೂಡ ಸೂಕ್ತವಾದ ಕೆಲವು ಬದಲಾವಣೆ ಮಾಡಿದ ಹೊರತು ಯಾವ ಸೊಸೈಟಿಗಳೂ ಕೂಡ ಸರಿಯಾಗಿ ಕೆಲಸ ಮಾಡಲಾರವು ಎಂದು ಈ ನಭೆಯಲ್ಲಿ ಹೇಳಲು ಇಷ್ಟಪಡುತ್ತೇನೆ.

ಈಗ ಮಾಡಿರತಕ್ಕದ್ದನ್ನೂ ಟೀಕೆ ಅಂತ ಬೇಕಾದರೂ ಅರ್ಥಮಾಡಿಕೊಳ್ಳಿ, ಅಥವಾ ಸಲಹೆ ಅಂತ ಬೇಕಾದರೂ ಅರ್ಥಮಾಡಿಕೊಳ್ಳಿ, ಈ ಸಲಹೆಗಳನ್ನು ಸರ್ಕಾರದವರು ಜಾರಿಗೆ ತಂದರೆ ಆರ್ಥಿಕ ದೃಷ್ಟಿಯಿಂದ ಯಾವ ರೀತಿ ಜನರ ಮಟ್ಟ ಹೆಚ್ಚಬೇಕೋ ಮತ್ತು ವಿದ್ಯೆ ಅಲ್ಲದೇ ನೀತಿಯ ದೃಷ್ಟಿಯಿಂದ ಅವರ ಮಟ್ಟ ಹೆಚ್ಚಬೇಕೋ ಅದು ಹೆಚ್ಚಾಗುವುದಕ್ಕೆ ಸಹಾಯಕವಾಗುತ್ತದೆ. ಆರ್ಥಿಕ ದೃಷ್ಟಿಯಿಂದ ಅವರ ಮಟ್ಟ ಹೆಚ್ಚಾದರೆ, ನೀತಿಯ ಮಟ್ಟ ಹೆಚ್ಚಾಗುತ್ತದೆ ಅದರ ಹಿನ್ನೆಲೆಯಲ್ಲೇ ಧರ್ಮ ಬರುತ್ತದೆ ಒಳ್ಳೆಯ ಧರ್ಮದಿಂದ ನಡೆದರೆ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ. ಆರ್ಥಿಕ ಸ್ಥಿತಿ ಉತ್ತಮವಾದರೆ ನೀತಿವಂತರಾಗಿ ಬಾಳುವುದಕ್ಕೆ ಅವಕಾಶವಾಗುತ್ತದೆ. ಈ ಎರಡೂ ದೃಷ್ಟಿಯಿಂದಲೂ ಸರ್ಕಾರದವರು ಈ ಕಾರ್ಯಕ್ರಮಗಳನ್ನು ಕೈಕೊಂಡು ನಡೆಸಬೇಕೆಂದು ಹೇಳುತ್ತೇನೆ ಮಾನ್ಯ ಆರ್ಥಿಕ ಮಂತ್ರಿ ಗಳು ತಂದಿರುವ ಆಯವ್ಯಯ ಅಂದಾಜು ಮತ್ತು ಇತರ ವಿಷಯಗಳು ಬಹಳ ಚೆನ್ನಾಗಿವೆ. ನಾನು ಮೊದಲೇ ಹೇಳಿದ ಹಾಗೆ ಎರಡೂ ವಿಷಯವನ್ನೂ ಕೂಡ ಒಬ್ಬರೇ ಮಾತನಾಡುವುದು ಸ್ವಲ್ಪ ಅನುಚಿತ ವಾಗುತ್ತದೆ, ಸಾಧ್ಯವೂ ಆಗುವುದಿಲ್ಲ. ಶ್ರೀಮಾನ್ ಅಡಿಗರವರು ಹೈಕೋರ್ಟ್ ಬಿಲ್ಡಿಂಗ್ ವಿಷಯ ವಾಗಿ ಹೇಳುತ್ತಾ ಅದಕ್ಕೆ ಸರಿಯಾದ, ಅದರ ಘನತೆಗೆ ತಕ್ಕಂತಹ ಕಟ್ಟಡ ಇಲ್ಲ, ಅದಕ್ಕೆ ಗೌರವ ಸಲ್ಲಬೇ ಕಾದರೆ ಸರಿಯಾದ ರೀತಿಯಲ್ಲಿ ಒಂದು ಕಟ್ಟಡ ಇರಬೇಕೆಂದು ಹೇಳಿದರು, ನಿಜ ಅದನ್ನು ನಾನು ಒಪ್ಪಿ ಕೊಳ್ಳುತ್ತೇನೆ. ಅದಕ್ಕೆ ನನ್ನ ಬೆಂಬಲವನ್ನು ಕೊಡುತ್ತಾ ಒಂದು ಅಂಶವನ್ನು ಮಾತ್ರ ಹೇಳುತ್ತೇನೆ ಈಗ ಹೊಸದಾಗಿ ಚೆನೆನ್ಸಿಆಕ್ಟ್‌ನ್ನು ಜಾರಿಗೆ ತಂದ ಮೇರೆ ಹೊಸದಾಗಿ ಕೋರ್ಟುಗಳನ್ನು ಸ್ಥಾಪನೆ ಮಾಡಿದ್ದೀರಿ, ರಾಮನಗರದಲ್ಲಿರತಕ್ಕ ಕೋರ್ಟಿಗೆ ರಾಮನಗರ, ಚನ್ನಪಟ್ಟಣ, ನೆಲಮಂಗಲ, ದೊಡ್ಡ ಬಳ್ಳಾಪುರ ಈ ರೀತಿ 7-8 ಪ್ರದೇಶಗಳನ್ನು ಸೇರಿಸಿದ್ದೀರಿ, ಅಲ್ಲಿಂದ ಇಲ್ಲಿಗೆ ಒಂದು ಸಣ್ಣ ಕೇಸಿಗೆ ಬರಬೇಕಾದರೆ ಎಷ್ಟು ಕಷ್ಟ ಎಂಬುದನ್ನು ತಾವು ಗಮನಿಸಬೇಕು. ಅದೂ ಅಲ್ಲದೆ ಸರಿಯಾದ ಒಂದು ಕಟ್ಟಡ ಇಲ್ಲ, ಆದ್ದರಿಂದ ಕೋರ್ಟುಗಳು ನಡೆಯತಕ್ಕ ಕಡೆಗಳಲ್ಲಿ ಒಳ್ಳೆಯ ಕಟ್ಟಡಗಳನ್ನು ಕಟ್ಟಿದ

ಹೊರತು ಜನತೆಗೆ ಅದರಲ್ಲಿ ಗೌರವ ಇರುವುದಿಲ್ಲ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ರಾಮನಗರದ ವಿಷಯ ಹೇಳುವುದಾದರೆ 5 ಅಡಿ ಅಗಲ 10 ಅಡಿ ಉದ್ದ ಆ ಕಟ್ಟಡ ಇದೆ, ಅದೇ ರೀತಿ ಚನ್ನಪಟ್ಟಣದಲ್ಲೂ ಕೂಡ ಮೂರು ಶತಮಾನದ ಹಿಂದೆ ಕಟ್ಟಿದ ಹಳೇ ಕಟ್ಟಡ ಅದು ಬರುಕು ಬಿಟ್ಟಿದೆ, ತರೆಯುವೆಲೆ ಬೀಳುವ ಹಾಗೆ ಇದೆ. ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೆ, ಅದನ್ನೂ ಕೂಡ ಅವರು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಾ, ಈ ಅಯವ್ಯಯ ಪಟ್ಟಿಯನ್ನು ಸಮರ್ಥನೆ ಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ವೆಂಕಟಪ್ಪ (ವಿಧಾನ ಸಭಾ ಕ್ಷೇತ್ರ).—ಮಾನ್ಯ ಅಧ್ಯಕ್ಷರೇ, ಈ ಬಡ್ಜೆಟ್‌ನ ವಿಷಯದಲ್ಲಿ ಇದುವರೆಗೆ ದೀರ್ಘವಾಗಿ ಚರ್ಚೆಯಾಗಿದೆ. ಈ ಸಾಲಿನ ಆಯವ್ಯಯದ ಪಟ್ಟಿ, ನಿರಾಶಾದಾಯಕವಾಗಿಲ್ಲ, ಇದು ಉಳಿತಾಯ ಬಜೆಟ್ಟು ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅದರ ಜೊತೆಗೆ ಯಾವ ತೆರಿಗೆಯನ್ನೂ ಹೊರಿಸಿಲ್ಲ ಅನ್ನುವುದೂ ಕೂಡ ಒಂದು ಸಂತೋಷದ ವಿಷಯ. ಆದರೆ ಕೆಲವು ವಿಷಯಗಳಲ್ಲಿ ಸ್ವಲ್ಪಮಟ್ಟಿಗೆ ಮಾಡಬೇಕಾದ ಕಾರ್ಯವನ್ನು ಮಾಡಿಲ್ಲವೇನೋ ಎಂದು ಅನಿಸುತ್ತದೆ. ಈಗ ದೇಶದಲ್ಲಿ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಅಭಾವ ಪರಿಸ್ಥಿತಿ ಇದೆ ಎಂದು ಸರ್ಕಾರದ ವರೇ ಒಪ್ಪಿಕೊಂಡಿದ್ದಾರೆ. ಅಂತಹ ಕಡೆಗಳಲ್ಲಿ ಜನರಿಗೆ ಅನುಕೂಲವಾಗುವುದಕ್ಕೋಸ್ಕರ ಕಾಂಗಾರಿಗಳನ್ನು ಮಾಡಬೇಕು ಎಂದು ಮನಸ್ಸು ಮಾಡಿದ್ದಾರೆ. ನಮ್ಮ ಡಿಸ್ಟ್ರಿಕ್ಟಿನ ಪರಿಸ್ಥಿತಿ ಬಹಳ ಕಷ್ಟ ಸ್ಥಿತಿಯಲ್ಲಿದೆ ಎಂದು ಹೇಳಿ ನಮ್ಮ ಡಿಸ್ಟ್ರಿಕ್ಟ್‌ನ ಎಲ್ಲಾ ಅಸೆಂಬ್ಲಿ ಮೆಂಬರುಗಳೂ ಮತ್ತು ಈ ಕೌನ್ಸಿಲ್‌ನ ಮೆಂಬರುಗಳು ಅಲ್ಲದೆ ರಾಜ್ಯ ಸಭೆಯ ಲೋಕ ಸಭೆಯ ಮೆಂಬರುಗಳು, ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರುಗಳು ಮತ್ತು ಇತರ ಮುಖ್ಯಸ್ಥರು, ಇಷ್ಟು ಜನರೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೋಗಿ ನಮ್ಮ ಡಿಸ್ಟ್ರಿಕ್ಟಿನಲ್ಲಿರತಕ್ಕ ಕುಂದುಕೊರತೆಗಳನ್ನು ಹೇಳಿ ಅದಕ್ಕೆ ತಕ್ಕ ಪರಿಹಾರಗಳನ್ನು ಒದಗಿಸಿಕೊಡಬೇಕೆಂದು ಹೇಳಿಕೊಂಡಿರುವುದು ಮಾತ್ರವಲ್ಲದೆ ಕಂದಾಯವನ್ನು ವಜಾ ಮಾಡಿಕೊಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಇಂತಹ ಸ್ಥಿತಿ ನಮ್ಮ ಡಿಸ್ಟ್ರಿಕ್ಟಿನಲ್ಲಿ ಮಾತ್ರವೇ ಅಲ್ಲ, ಇನ್ನೂ ಹತ್ತು ಡಿಸ್ಟ್ರಿಕ್ಟುಗಳಲ್ಲೂ ಇದೆ ಎಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಹೀಗಿದ್ದರೂ ಕೂಡ ಕಂದಾಯ ಈ ವರ್ಷ ಎಷ್ಟು ಉತ್ಪತ್ತಿಯಾಗುತ್ತದೆ ಅನ್ನುವುದರಲ್ಲಿ ಇದುವರೆಗೂ ಇದ್ದದ್ದಕ್ಕಿಂತ ಈ ವರ್ಷ ಒಂದೂವರೆಯಷ್ಟು ಹೆಚ್ಚಾಗಿದೆ. ಈ ವರ್ಷ 9 ಕೋಟಿ 4 ಲಕ್ಷ 28 ಸಾವಿರ ರೂಪಾಯಿ ಉತ್ಪತ್ತಿಯಾಗುತ್ತದೆ ಎಂದು ಕೊಟ್ಟಿದ್ದೀರಿ, ಕಳೆದ ವರ್ಷ 6 ಕೋಟಿ 49 ಲಕ್ಷ 19 ಸಾವಿರ ಅಂತ ಕೊಟ್ಟಿದ್ದೀರಿ, ಅದರ ಹಿಂದಿನ ವರ್ಷ 1966-67ಕ್ಕೆ 386 ಲಕ್ಷ ಇದೆ. ಈ ರೀತಿ ಹೆಚ್ಚಾಗಿರುವುದು ಏನು ಕಾರಣ ಎಂಬುದನ್ನು ಕೊಟ್ಟಿಲ್ಲ. ಲ್ಯಾಂಡ್ ರೆವಿನ್ಯೂವನ್ನು ವಜಾ ಮಾಡುತ್ತೇವೆ ಎಂದು ಹೇಳಿದ್ದೀರಿ, ಅದನ್ನು ಈಗ ಬದಲಾವಣೆ ಮಾಡಿದ್ದೀರಿ, ಅದನ್ನು ಮಾಡಿದರೆ ಲೆಕ್ಕಪತ್ರಗಳನ್ನು ಇಡುವುದಕ್ಕೆ ತೊಂದರೆಯಾಗುತ್ತದೆ ಎಂದು ಶ್ರೀಮಾನ್ ಸುಬ್ಬರಾಯರು ಹೇಳಿದರು. ಈ ವರ್ಷ ಅಭಾವ ಪರಿಸ್ಥಿತಿ ಇದ್ದರೂ ಕೂಡ ಈ ರೆವಿನ್ಯೂ ಟಾಪಿನಿಂದ ಒಂದೂವರೆಯಷ್ಟು ಉತ್ಪತ್ತಿ ಹೆಚ್ಚಾಗುತ್ತದೆ ಎಂದು ಯಾವ ದೃಷ್ಟಿಯಿಂದ ತೋರಿಸಿದ್ದೀರಿ ಎಂಬುದು ಹೇಳುವುದು ಕಷ್ಟವಾಗಿದೆ. ಆದ್ದರಿಂದ ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ವರ್ಷ ಬಹಳಮಟ್ಟಿಗೆ ಅನೇಕ ಕಡೆಗಳಲ್ಲಿ ಕೊನೆ ಘಳಿಗೆಯಲ್ಲಿ ಮಳೆಯ ಅಭಾವ ಒಂದು ದವಸ ಧಾನ್ಯಗಳನ್ನು ಸರಿಯಾಗಿ ಬೆಳೆಯುವುದಕ್ಕೆ ಆಗದೆ ಜನ ಬಹಳ ಕಷ್ಟ ದಿಶೆಯಲ್ಲಿರುವುದರಿಂದ ಎಲ್ಲೆಲ್ಲಿ ಬೆಳೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೋ ಅಂತಹ ಕಡೆಗಳಲ್ಲಾದರೂ ಕಂದಾಯವನ್ನು ಈ ವರ್ಷದ ಮಟ್ಟಿಗೆ ಮಾಫಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೈಗಾರಿಕೋದ್ಯಮಗಳಿಂದ ಇದುವರೆಗೂ ಲುಕ್ಸಾನಾಗುತ್ತಾ ಇತ್ತು, ಇದನ್ನು ಎಲ್ಲರೂ ಹೇಳಿದ್ದಾರೆ, ಅವರೂ ಕೂಡ ಒಪ್ಪಿಕೊಂಡಿದ್ದಾರೆ, ಈ ವರ್ಷ ಇದ್ದಕ್ಕಿದ್ದಹಾಗೆ 11 ಲಕ್ಷದ 9 ಸಾವಿರ ರೂಪಾಯಿ ಉಳಿತಾಯವಾಗುತ್ತದೆ ಎಂದು ಹೇಳಿ ಕೊಟ್ಟಿದ್ದಾರೆ. ಈ ಅಂಕಿ ಹೇಗೆ ಬಂತು ಅಂತ ಗೊತ್ತಿಲ್ಲ. ಒಟ್ಟು ಖರ್ಚು ಕೈಗಾರಿಕೆಗಳಿಗೆ 12 ಕೋಟಿ 57 ಲಕ್ಷದ 54 ಸಾವಿರ ರೂಪಾಯಿ, ಉತ್ಪತ್ತಿ ಬರುವುದು 11 ಕೋಟಿ 1 ಲಕ್ಷದ 20 ಸಾವಿರ ರೂಪಾಯಿ ಸರ್ಕಾರದವರು ಬಡ್ಜೆಟ್ಟಿನ ಪುಟ 56 ಮತ್ತು 61 ರಲ್ಲಿ ಸೂಚಿಸಿರತಕ್ಕ ಪ್ರಕಾರ ನಮ್ಮ ಉತ್ಪತ್ತಿ ಏನಿದೆ ಮತ್ತು ಖರ್ಚೇನಿದೆ ಎಂಬುದನ್ನು ನಾನೀಗ ಮಾತನಾಡುತಿದ್ದೇನೆ. ಇದೇ ವಿಚಾರವನ್ನು ಪುಟ 401 ರಲ್ಲೂ ಸಹಾ ಹೇಳಿದೆ. ಇದನ್ನೆಲ್ಲಾ ನೋಡಿದರೆ ನಮಗೆ ಸುಮಾರು ಒಂದು ಕೋಟಿ 50 ಲಕ್ಷ ಚಿಲ್ಲರೆ ಲುಕ್ಸಾನಾಗುತ್ತದೆಂಬ ನನಗೆ ಕಂಡುಬರುತ್ತಿದೆ. ಹೀಗಿದ್ದರೂ ಇಲ್ಲ ಹೇಗೆ ಸರ್ಕಾರದವರು ನಮಗೆ ಲಾಭ ಬರುತ್ತೆಂದು ಹೇಳಿದ್ದಾರೆ ?

ಶ್ರೀ ಎಚ್. ಆರ್. ಅಬ್ದುಲ್ ಗಫಾರ್ (ಹಣಕಾಸಿನ ಶಾಖೆಯ ಉಪಸಚಿವರು).—ನಾನು ಉತ್ತರ ಕೊಡುವಾಗ ಅದನ್ನು ತಿಳಿಸುತ್ತೇನೆ. ಹೀಗೆ ಲಾಭ ಬರುತ್ತ ಅನ್ನುವುದು ಆಗ ತಮಗೆ ಗೊತ್ತಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ನೀವು ಆನಂತರ ಇದನ್ನು ಕ್ಲಾರಿಫೈ ಮಾಡುವುದೂ ಇಲ್ಲ, ಏನೂ ಇಲ್ಲ. ಹಾಗೆ ತಮಗೆ ಉತ್ತರ ಹೇಳತಕ್ಕ ಇಷ್ಟ ವಿದ್ದರೆ ಈಗಲೇ ಹೇಳಿ. ಹಾಗೇ ಈ ವರ್ಷ ಇರಿಗೇಷನ್ ನಿಂದಲೂ ನಮಗೆ ಆದಾಯ ಬರುತ್ತದೆಂದು ಹೇಳಿದ್ದಾರೆ. ಅದು ಹೇಗೆ ಆದಾಯ ಬರುತ್ತದೆ ಅನ್ನುವುದೇ ನನಗೆ ತಿಳಿಯದಾಗಿದೆ. ನಮಗೆ ಇದರಿಂದ 2 ಕೋಟಿ 44 ಲಕ್ಷ ಉತ್ಪತ್ತಿ ಇದ್ದರೆ ಇದಕ್ಕೆ ಖರ್ಚಾಗುವುದು 12 ಕೋಟಿ 49 ಲಕ್ಷ ರೂಪಾಯಿಗಳು. ಹೀಗಿರುವಾಗ ಇದರಿಂದ ನಮಗೆ ಲಾಭ ಬರುತ್ತದೆ ಅಂದರೆ ಇದಕ್ಕೆ ಏನು ಹೇಳಬೇಕು! ಇನ್ನು ಕೈಗಾರಿಕೆಗಳ ವಿಚಾರಕ್ಕೆ ಬಂದರೆ ಈ ಬಾಬ್ತಿಂದ 81 46 ಲಕ್ಷ ಉತ್ಪತ್ತಿ ಬರುತ್ತದೆಂದು ಹೇಳಿದ್ದಾರೆ. ಅದು ಹೇಗೆ ಉತ್ಪತ್ತಿ ಬರುತ್ತ, ಎಂದು ಕೇಳುತ್ತೇನೆ. ನಾನು ಮಾನ್ಯ ಮಂತ್ರಿಗಳಿಗೆ ಪ್ರಶ್ನೆಯನ್ನು ಬೇಕಾದರೆ ಕಳಿಸುತ್ತೇನೆ ಅದನ್ನು ನೋಟ್ ಮಾಡಿಕೊಂಡು ನನಗೆ ನಂತರ ಉತ್ತರವನ್ನು ಹೇಳಲಿ. ಆದರೆ ಈಗ ಈ ಬಜೆಟ್ಟಿನಲ್ಲಿ ಹೇಳಿರುವಂತೆ ಯಾವ ಭೂಪಟಗಳಿಂದಲೂ ನಮಗೆ ಉತ್ಪತ್ತಿ ಬರುವುದಿಲ್ಲ; ಹಾಗೇ ಈ ಕೈಗಾರಿಕೆಗಳಿಂದಲೂ ನಮಗೆ ಉತ್ಪತ್ತಿ ಬರುವುದಿಲ್ಲ. ಈ ಬಾಬುಗಳಲ್ಲಿ ನಮಗೆ ಬರತಕ್ಕ ಉತ್ಪತ್ತಿಗೆ ಬದಲು ಖರ್ಚೇ ಜಾಸ್ತಿಯಾಗುತ್ತದೆ. ಹೀಗಿರುವಾಗ ಈ ಬಾಬುಗಳಿಂದ ಇಷ್ಟು ಉತ್ಪತ್ತಿ ಬರುತ್ತದೆ ಎಂದು ಹೇಳುವುದು ನಿಜವಲ್ಲ. ಶ್ರೀ ಅಡಿಗಾರವರು ಮಾತನಾಡುತ ಅನೇಕ ಕೈಗಾರಿಕೆಗಳಿಂದ ನಮಗೆ ಉತ್ಪತ್ತಿ ಬರುತ್ತಿದೆಯೆಂದೂ ಮತ್ತು ಸೆರಿಕಲ್ಚರ್ ಹಾಗೂ ಆದಕ್ಕೆ ಸಂಬಂಧಪಟ್ಟ ಫಿಲೇಚರ್ ಕೈಗಾರಿಕೆಯಿಂದ ಸರ್ಕಾರಕ್ಕೆ ಸುಮಾರು ಒಂದು ಆಥವಾ ಒಂದೂವರೆ ಕೋಟಿ ರೂಪಾಯಿಗಳು ಲಕ್ಷಾನಾದರೂ ಅದರಿಂದ ಜನರಿಗೆ ಬಹಳ ಸೌಲಭ್ಯವಿದೆ, ಅದು ಬಹಳ ಜನರಿಗೆ ಉಪಕಾರಿಯಾದ ಒಂದು ಕೈಗಾರಿಕೆಯಾಗಿದೆಯೆಂದು ಹೇಳಿದರು. ಆದರೆ ಅದು ಬಹಳ ಜನರಿಗೆ ಒಂದು ಉಪಕಾರಿಯಾದ ಕೈಗಾರಿಕೆಯಾಗಿದೆಯೆಂದು ಅದನ್ನು ಒಂದು ಪೇಳೆ ಲಕ್ಷಾನಾದರೂ ಕೈಬಿಡಬಾರದೆಂದು ಶ್ರೀಮಾನ್ ಸುಬ್ಬರಾಯರು ಹೇಳಿದರು. ಆದರೆ ಶ್ರೀಮಾನ್ ಶ್ರೀಕಂಠಯ್ಯನವರು ಆ ಬಾಬನ್ನು ನಮಗೆ ಕೊಡಿ ಯಾವ ಲಕ್ಷಾನೂ ಇಲ್ಲದಂತೆ ತಾವು ಅದನ್ನು ನಡೆಸುವುದಾಗಿ ಅವರು ಹೇಳಿದ್ದಾರೆ. ಈ ವಾದಗಳನ್ನೆಲ್ಲಾ ಕೇಳಿದರೆ ಇದರಲ್ಲಿ ಏನೋ ಒಂದು ಅಡ್ಮಿನಿಸ್ಟ್ರೇಷನ್ ದೋಷ ಇದ್ದಂತೆ ಕಂಡುಬರುತ್ತಿದೆ. ಇದರಲ್ಲಿ ಯಾವ ಅನುಮಾನವೂ ಇಲ್ಲ, ಯಾರೂ ಅನುಮಾನ ಪಡಬೇಕಾಗಿಯೂ ಇಲ್ಲ. ಈ ವ್ಯವಹಾರವನ್ನು ಸರ್ಕಾರದವರಲ್ಲದೆ ಬೇರೆ ಇನ್ನಾವ ಖಾಸಗೀ ಜನರು ನಡೆಸಿದರೆ ಇದನ್ನು ಹೀಗೆ ಲಕ್ಷಾನಿನಲ್ಲಿ ನಡೆಸುತ್ತಿರಲಿಲ್ಲ. ಇದರಿಂದ ಪೆಚ್ಚಿನ ಲಾಭವನ್ನು ಪಡೆಯುತ್ತಿದ್ದರು. ಅದುದರಿಂದ ಇದರಲ್ಲಿ ಏನೋ ಅಡ್ಮಿನಿಸ್ಟ್ರೇಷನ್ ದೋಷವಿದೆ ಎನ್ನುವುದು ಖಚಿತವಾಗುತ್ತದೆ. ನಾವು ಇವುಗಳ ಮೇಲೆ ಇಷ್ಟೊಂದು ಭಾರಿ ಬಂಡವಾಳವನ್ನು ಹಾಕಿ ಅವುಗಳನ್ನು ರಾಥದಾಯಕ ರೀತಿಯಲ್ಲಿ ನಡೆಸದಿರುವುದು ಸರಿಯಾದ್ದಲ್ಲ.

ಇನ್ನು ವಿಲೇಜ್ ಪಂಚಾಯಿತಿಗಳಿಗೂ ಮತ್ತು ಲೋಕಲ್ ಬೋರ್ಡ್‌ಗಳಿಗೂ ಸಾಲ ಕೊಡತಕ್ಕ ವಿಚಾರಕ್ಕೆ ಬಂದರೆ—ನಮ್ಮ ರಾಜ್ಯದಲ್ಲಿ ಎಷ್ಟೋ ಪಂಚಾಯಿತಿಗಳೂ ಮತ್ತು ಲೋಕಲ್ ಬೋರ್ಡ್ ಸಂಸ್ಥೆಗಳೂ ಇವೆ. ಎಷ್ಟೋ ಸಂದರ್ಭಗಳಲ್ಲಿ ಇವುಗಳಿಗೆ ಹಣದ ತಗಾದೆ ಉಂಟಾದಾಗ ಸಾಲಕ್ಕೆ ಸರ್ಕಾರವನ್ನು ಅವು ಕೇಳಿದ್ದಾರೆ ಅವುಗಳಿಗೆ ಹಣವಿಲ್ಲ ಎಂದು ಹೇಳಿದ್ದಾರೆ. ಈ ದಿವಸ ಈ ಬಾಬಿಗೆ ಸರ್ಕಾರದವರು ಒದಗಿಸಿರತಕ್ಕ ಹಣವೆಷ್ಟು? ಹೋದ ವರ್ಷ ಈ ಬಾಬಿಗೆ ಸರ್ಕಾರದವರು 5 ಲಕ್ಷ 92 ಸಾವಿರ ರೂಪಾಯಿಗಳನ್ನು ಒದಗಿಸಿದರು. ರಿವೈಸ್ಡ್ ಬಜೆಟ್ಟನ್ನು ನೋಡಿದರೆ ತದರಲ್ಲಿ ಖರ್ಚಾಗಿರತಕ್ಕ ಹಣವೇನು ಎಂದರೆ ಅದು ಒಂದು ಲಕ್ಷ ಮಾತ್ರ. ಅಷ್ಟೊಂದು ಅಧಿಕ ನಿಜ್ಯೆಯಲ್ಲರತಕ್ಕ ಪಂಚಾಯಿತಿಗಳಿಗೂ ಮತ್ತು ಲೋಕಲ್ ಬೋರ್ಡ್ ಸಂಸ್ಥೆಗಳಿಗೂ ಇಷ್ಟು ಕಡಮೆ ಹಣವನ್ನು ಖರ್ಚುಮಾಡಿರತಕ್ಕದ್ದು ಬಹಳ ವಿಷಾದನೀಯ. ನಾನು ಇದನ್ನು ವಿಶೇಷವಾಗಿ ಹೇಳುತ್ತಿದ್ದೇನೆಂದರೆ, ನಮ್ಮ ಚುನಾವಣೆ ಮುನಿಸಿಪಾಲಿಟಿಯವರು ಊರನ್ನು ಬಿದಾವಣೆ ಮಾಡತಕ್ಕ ಬಗ್ಗೆ ಭೂಮಿಯನ್ನು ಅಕ್ವಯರ್ ಮಾಡಬೇಕಾದ ಪ್ರಮೇಯ ಉಂಟಾಗಿದ್ದಾಗ ಸರ್ಕಾರವನ್ನು ಸಾಲ ಕೊಡಿ ಆ ಹಣವನ್ನು ಅಲ್ಲಿ ಸೈಟುಗಳನ್ನು ಮಾಡಿ ಅವನ್ನು ವಿಶೇಷವಾಗಿ ಮಾಡಿದ ಕೂಡಲೆ ನಿಮ್ಮ ಹಣವನ್ನು ನಿಮಗೆ ಕೊಟ್ಟುಬಿಡುತ್ತೇವೆಂದು ಅಂಗಲಾಚಿದರೂ ಸಾಲ ಕೊಡಲಿಲ್ಲ. ಹಣವಿಲ್ಲ ಎಂದರು. ಆದುದರಿಂದ ಈ ದಿವಸ ಸರ್ಕಾರದವರು ಗ್ರಾಮಪಂಚಾಯಿತಿಗಳಿಗೂ ಮತ್ತು ತಾಲ್ಲೂಕ್ ಬೋರ್ಡ್‌ಗಳಿಗೂ ಒದಗಿಸಿರತಕ್ಕ ಸಾಲದ ಮೊತ್ತ ಬಹಳ ಕಡಮೆಯಾಗುತ್ತು. ಸಾಮಾನ್ಯವಾಗಿ ಇಲ್ಲಿ ಮಾತನಾಡತಕ್ಕವರೆಲ್ಲರೂ ಆ ಹಳ್ಳಿಯ ಜನರನ್ನು ಎಷ್ಟು ಉದ್ಧಾರಮಾಡಲು

ಮಾತನಾಡುತ್ತಿದ್ದರೆನ್ನುವಂತೆ ಮಾತನಾಡುತ್ತಾರೆ. ಆದರೆ ಅದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತಿದೆ ಎಂಬುದನ್ನು ನಾವೀಗ ಮುಖ್ಯವಾಗಿ ಗಮನಿಸಬೇಕಾಗಿದೆ. ನಾವು ಇಲ್ಲಿ ಹೇಳುತ್ತಿರುವುದಕ್ಕೂ ಕಾರ್ಯತಃ ಅಲ್ಲಿ ಸಾಧನೆಯಾಗಿರುವುದಕ್ಕೂ ಒಂದೊಕ್ಕೊಂದಕ್ಕೆ ಸಂಬಂಧವೇ ಇರುವುದಿಲ್ಲ.

5-45 P.M.

ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಹಳ್ಳಿಯ ಜನರಿಗೆ ಮನೆಗಳ ಸೌಕರ್ಯಕ್ಕಾಗಿ ಸಾಲ ಕೊಡಲು ಒದಗಿಸಿರತಕ್ಕ ಹಣವೆಷ್ಟು ಎಂದರೆ ಅದು ಕೇವಲ 10 ಲಕ್ಷ ರೂಪಾಯಿಗಳು ಮಾತ್ರ. ಈ ವಿಚಾರದಲ್ಲಿ ಹಳ್ಳಿಯ ಜನರು ಎಷ್ಟು ಕಷ್ಟ ಪಡುತ್ತಿದ್ದಾರೆಂಬುದನ್ನು ಹೇಳುವುದಕ್ಕೇ ಸಾಧ್ಯವಿಲ್ಲ. ಸಾವಿರಾರು ಜನರು ಹುಲ್ಲು ಜೋಪಡಿಗಳಲ್ಲಿ ವಾಸಮಾಡುತ್ತಿದ್ದಾರೆ. ವರ್ಷಂಪ್ರತಿ ಆ ಮನೆಗಳು ಬೆಂಕಿಯ ಅನಾಹುತಕ್ಕೆ ಈಡಾಗುತ್ತಲೇ ಇವೆ. ಹಾಗಿದ್ದರೂ ಅವರಿಗೆ ಒದಗಿಸಿರತಕ್ಕ ಹಣ 10 ಲಕ್ಷ ಮಾತ್ರ. ಈ ಹಣವೆಲ್ಲ ಎಷ್ಟು ಜನರಿಗೆ ಸಹಾಯ ಮಾಡಲು ಸಾಧ್ಯ? ಅದೇ ಪಟ್ಟಣಗಳಲ್ಲಿ ವಾಸ ಮಾಡತಕ್ಕ ಜನರಿಗೆ ಈ ರೀತಿಯ ಒದಗಿಸಿರತಕ್ಕ ಹಣವೆಷ್ಟು ಎಂದರೆ, ಅದು ಒಂದು ಕೋಟಿ 22 ಲಕ್ಷ 81 ಸಾವಿರ ರೂಪಾಯಿಗಳು. ಹಳ್ಳಿಯ ರೈತರನ್ನು ಸರ್ಕಾರದವರು ತಮ್ಮ ಒಂದು ಒಳ್ಳೆಯ ದೃಷ್ಟಿಯಲ್ಲಿಟ್ಟುಕೊಂಡು ಅವರನ್ನು ಉದ್ಧಾರ ಮಾಡತಕ್ಕ ನೀತಿ ಇದೇನೋ ಸರ್ಕಾರದವರು ಆ ಹಳ್ಳಿಯ ಜನರನ್ನು ತಾವು ಉದ್ಧಾರ ಮಾಡುತ್ತಿದ್ದೇವೆ ಎಂದು ಹೇಳತಕ್ಕ ಮಾತನ್ನು ಇನ್ನಾದರೂ ಕೈ ಬಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲವೇ ಅವರಿಗೆ ಇನ್ನೂ ಅಧಿಕ ಹಣವನ್ನು ಕೂಡಲೆ ಒದಗಿಸಬೇಕು ಎಂದು ಸರ್ಕಾರದಲ್ಲಿ ನಾನು ಅರಿಕೆಮಾಡಿಕೊಳ್ಳುತ್ತೇನೆ.

ಇನ್ನು ಆ ಹಳ್ಳಿಯ ಜನರಿಗೆ ಆಹಾರದ ಹಂಚಿಕೆಯ ವಿಷಯದಲ್ಲೂ ಇದೇ ತಾರತಮ್ಯ ಮಾಡುತ್ತಿದ್ದಾರೆ. ಹಳ್ಳಿಯ ಜನರಿಗೇ ಒಂದು ರೀತಿಯ ಹಂಚಿಕೆ, ಪಟ್ಟಣಗಳಲ್ಲಿರತಕ್ಕ ಜನರಿಗೇ ಒಂದು ರೀತಿಯ ಹಂಚಿಕೆ. ದೇಶದಲ್ಲಿ ಒಂದು ಸಮಾನವಾದ ಆಹಾರದ ಹಂಚಿಕೆ ಇಲ್ಲ. ಪಟ್ಟಣಕ್ಕೆ ಮಾತ್ರ ಇವರು ಒಂದು ಪಡಿತರ ವ್ಯವಸ್ಥೆಯನ್ನು ಮಾಡಿದರೆ ಆ ಹಳ್ಳಿಯ ಜನರ ಗತಿ ಏನಾಗಬೇಕು? ಈ ವರ್ಷ ದೇಶಾದ್ಯಂತ ಮಳೆಯಾಗದೆ ಬೆಳೆಗಳಾಗಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಸರ್ಕಾರಕ್ಕೂ ಗೊತ್ತಿದೆ. ನಾನು ನನ್ನ ಒಂದು ಜಿಲ್ಲೆಯಲ್ಲಿ ನನ್ನ ತಾಲ್ಲೂಕಿನ ಸ್ಥಿತಿಯೇನಾಗಿದೆ ಎಂಬುದನ್ನು ಹೇಳುತ್ತೇನೆ–1966 ರಲ್ಲಿ ತಿಂಗಳೊಂದಕ್ಕೆ 10 ಸಾವಿರಕ್ಕೆ ಕಡಮೆ ಇಲ್ಲದ ಜನಸಂಖ್ಯೆಯುಳ್ಳ ಪ್ರದೇಶಕ್ಕೆ 11,990 ಕ್ವಿಂಟಾಲ್ ಧಾನ್ಯವನ್ನು ಒದಗಿಸುತ್ತಿದ್ದರು. ಅದು ಬಹಳ ಮಟ್ಟಿಗೆ 1967 ರಲ್ಲಿ ಕಡಮೆಯಾಯಿತು. ಈಗ ತಿಂಗಳಿಗೆ ಎರಡು ಸಾವಿರ ಚಿಲ್ಲರೆ ಕ್ವಿಂಟಾಲುಗಳನ್ನು ಪ್ರಾರಂಭಿಸಿದ್ದಾರೆ. ಈ ವರ್ಷ ಜನವರಿ ಮತ್ತು ಫೆಬ್ರುವರಿ ತಿಂಗಳಿನಲ್ಲಿ ನೋಡಿದರೆ ಸಾವಿರ ಚಿಲ್ಲರೆ ಕ್ವಿಂಟಾಲ್ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಹೀಗಾದರೆ ಹಳ್ಳಿಯವರನ್ನು ಸಮಾಧಾನಪಡಿಸುವುದು ಹೇಗೆ? ಹೇಗೆ ಅದನ್ನು ಕೊಡತಕ್ಕಂಥಾದ್ದು? ಅದರಲ್ಲಿಯೂ ಸಕ್ಕರೆಯನ್ನು ಹಿಂದೆ 580 ಮೂಟೆಗಳನ್ನು ಒಂದು ತಿಂಗಳಿಗೆ ಕೊಡುತ್ತಿದ್ದರು. ಈಗ 140 ಮೂಟೆಗಳನ್ನು ಕೊಡುತ್ತಿದ್ದಾರೆ. ಜನವರಿ ಮತ್ತು ಫೆಬ್ರುವರಿಯಲ್ಲಿ ಅದೂ ಇಲ್ಲ. ಇನ್ನೂ ಕೊಚ್ಚೇ ಇಲ್ಲ. ಹೀಗಾದರೆ ಈ ದೇಶದಲ್ಲಿನ ಹಳ್ಳಿಗಾಡಿನ ಜನರಿಗೆ ಯಾವ ರೀತಿಯಾಗಿ ಸಮಾಧಾನವನ್ನುಂಟುಮಾಡುವುದಕ್ಕೆ ಆಗುತ್ತದೆಂಬುದನ್ನು ಸರ್ಕಾರದವರು ಯೋಜನೆಮಾಡಬೇಕು. ಈ ರಾಷ್ಟ್ರೀಯ ವಿಸ್ತರಣೆ ಯೋಜನೆ ಅಥವಾ ಎನ್.ಇ.ಎಸ್. ಯೋಜನೆಗಳಿಗೆ ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತಿದ್ದಾರೆ. ಅದರಲ್ಲಿ ಬಹು ಭಾಗ ಸುಮಾರು ಶೇಕಡ 70ರಷ್ಟು ಅಧಿಕಾರಿಗಳ ಸಂಬಳಕ್ಕೇ ಖರ್ಚಾಗುತ್ತದೆ. ಜನರಿಗೆ ಉಪಕಾರ ಮಾಡತಕ್ಕ ಬಾಬುಗಳಿಗೆ ಏನು ಹಣ ಖರ್ಚಾಗುತ್ತಾ ಇಲ್ಲ. ಇದಕ್ಕಾಗಿ ಹಣವನ್ನು ಸುಮ್ಮನೆ ಖರ್ಚುಮಾಡುವುದಕ್ಕೆ ಬದಲಾಗಿ ಈಗ ತಾಲ್ಲೂಕುಬೋರ್ಡ್‌ಗಳಿವೆ, ಅವುಗಳಿಗೆ ಈ ಯೋಜನೆಯ ಕೆಲಸಕಾರ್ಯಗಳನ್ನು ಒಪ್ಪಿಸಿದರೆ ಖರ್ಚು ಕಡಿಮೆಯಾಗುತ್ತದೆ ಮತ್ತು ಕೆಲಸಗಳು ಇನ್ನೂ ಚೆನ್ನಾಗಿ ನಡೆಯುತ್ತವೆ. ಆ ಹಣವನ್ನು ಪಂಚಾಯತಿಗಳಿಗೂ ಮತ್ತು ತಾಲ್ಲೂಕುಬೋರ್ಡ್‌ಗಳಿಗೂ ಕೊಡುವುದು ಒಳ್ಳೆಯದು ಇದುವರೆಗೂ ಎನ್.ಇ.ಎಸ್. ಅವರು ಏನೇನು ಕೆಲಸಗಳನ್ನು ಮಾಡುತ್ತಿದ್ದರೋ ಆ ಕೆಲಸಗಳನ್ನೆಲ್ಲಾ ಅವರು ಮಾಡುವುದಕ್ಕೆ ಏನು ತೊಂದರೆ ಇದೆ? ಅವರು ಇನ್ನೂ ಚೆನ್ನಾಗಿ ಮಾಡುತ್ತಾರೆ. ಇತ್ಯಕಡೆ ಖರ್ಚೂ ಸಹ ಕಡಿಮೆಯಾಗುತ್ತದೆ. ಗ್ರಾಮಾಂತರ ಜನರಿಗೆ ತಮ್ಮ ಊರಿನ ಯೋಗಕ್ಷೇಮವನ್ನು ನೋಡಿಕೊಳ್ಳತಕ್ಕ ಪರಿಸ್ಥಿತಿ ಬರುತ್ತದೆ. ಆ ರೀತಿಯಾಗಿ ಬದಲಾವಣೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಳ್ಳಿಯ ಜನರ ವಿಷಯದಲ್ಲಿ ಈ ರೀತಿಯ ತಾತ್ಸಾರ ಮನೋಭಾವನೆ ಬೇಡ. 1965-66ರಲ್ಲಿ 340 ಲಕ್ಷ ರೂಪಾಯಿಗಳನ್ನು ಹರಿಜನರ ವಸತಿಗಾಗಿ ಕೊಟ್ಟಿದ್ದರು. ಈಗ ಅದು ಇಲ್ಲವೇ ಇಲ್ಲ. ಅದನ್ನು ನಿಲ್ಲಿಸಿದ್ದಾರೆ. ಅದಕ್ಕೆ ಕಾರಣ ವೇನು? ರೂರಲ್ ಡೆವಲಪ್‌ಮೆಂಟಿಗಾಗಿ 101·49 ಸಾವಿರ ರೂಪಾಯಿಗಳನ್ನು ಹಿಂದೆ ಕೊಟ್ಟಿದ್ದರು.

(ಶ್ರೀ ವಿ. ವೆಂಕಟಪ್ಪ)

ಈ ವರ್ಷ ಆ ಬಾಬಿಗೆ ಕೇವಲ 68 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೀಗೆ ಯಾವ್ಯಾವುದು ಬಹಳ ಅಗತ್ಯವಿವೆಯೋ ಅಂತಹುಗಳಿಗೆ ಕೊಡಬೇಕಾದ ಹಣವನ್ನು ಕಡಿಮೆ ಮಾಡಿ ನಾವು ಬಜೆಟ್ಟಿನಲ್ಲಿ ಉಳಿಸಿದ್ದೇವೆಂದು ಹೇಳಿದರೆ ಅದನ್ನು ಹೇಗೆ ನಂಬುವುದು? ಇಷ್ಟೊಂದು ಕಡಿಮೆಮಾಡುವುದಕ್ಕೆ ಕಾರಣಗಳು ಏನೆಂಬುದೇ ಗೊತ್ತಾಗುವುದಿಲ್ಲ. ಈಗ ಮಾರಾಟತೆರಿಗೆಯನ್ನು ಜಾಸ್ತಿ ಮಾಡುತ್ತೇವೆಂದು ಹೇಳುತ್ತೀರಿ. ಪಾನ ನಿರೋಧವನ್ನು ಜಾರಿಗೆ ತಂದಿದ್ದರೂ ಹಣ ಸಾಲುವುದಿಲ್ಲವೆಂದು ಮಾರಾಟ ತೆರಿಗೆಯನ್ನು ಬೇರೆ ಹಾಕುತ್ತೀರಿ.

ಒಬ್ಬ ಮಾನ್ಯ ಸದಸ್ಯರು.—ಅದನ್ನು ಮದ್ಯಾಸಿನಲ್ಲಿ ಕೇಳಿದ್ದು.

ಶ್ರೀ ವಿ. ವೆಂಕಟಪ್ಪ.—ಇಲ್ಲಿಯೂ ಮತ್ತು ಮದ್ರಾಸಿನಲ್ಲಿ ಆ ರೀತಿ ಹೇಳಿರುವುದು ನಿಜ. ಕೆಲವು ಕಡೆಗಳಲ್ಲಿ ಈಗಾಗಲೇ ಪಾನನಿರೋಧವನ್ನು ಜಾರಿಗೆ ತಂದು ಅದರಲ್ಲಿ ಬೇಕಾದಷ್ಟು ಉತ್ಪತ್ತಿ ಯಾದರೂ ಕೂಡ ಇನ್ನೂ ಈ ತೆರಿಗೆಗಳನ್ನು ಕಡಿಮೆಮಾಡಲಿಲ್ಲ. ಈಗ ಈ ಪಾನ ನಿರೋಧವನ್ನು ಜಾರಿಗೆ ತಂದಮೇಲೆಯೂ ಪುನಃ ಅದನ್ನು ಎಲ್ಲಾ ಕಡೆಯೂ ಯಶಸ್ವಿಯಾಗಿ ಮಾರುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಾ ಇರುವುದನ್ನು ನೋಡಿದರೆ ಅದೇನೋ ಒಂದು ವಿಚಿತ್ರವಾಗಿ ಕಾಣುತ್ತಿದೆ. ಬೇಕಾದಷ್ಟು ಕಮಿಟಿಗಳನ್ನು ಮಾಡುತ್ತೀರಿ. ಕುಡಿಯುಬೇಡಿ ಎಂದು ಒಂದು ಕಡೆ ಹೇಳುವುದು, ಕುಡಿಯುವುದಕ್ಕೆ ಅನುಕೂಲಗಳನ್ನು ಒಂದು ಕಡೆ ಮಾಡುವುದು, ಇದು ಯಾವ ವಿಧವಾದ ತತ್ವವೋ ಎಂಬುದು ನನಗೆ ಅರ್ಥವಾಗುವುದಿಲ್ಲ. ಹಿಂದೆ ಈ ವಿಧಾನ ಪರಿಷತ್ತಿನಲ್ಲಿ ಒಬ್ಬ ಸದಸ್ಯರಿದ್ದರು. ಅವರು ಈ ಮದ್ಯಪಾನವನ್ನು ಎಲ್ಲರೂ ಸ್ವಲ್ಪ ತೆಗೆದುಕೊಂಡರೆ ಬಹಳ ಒಳ್ಳೆಯದೆಂದು ತಮಾಷೆಮಾಡಿ ಹೇಳುತ್ತಿದ್ದರು. ಆಗ ಇತರರು ಆ ರೀತಿ ಹೇಳುವವರೇ ಮೊದಲು ಸ್ವಲ್ಪ ತೆಗೆದುಕೊಂಡರೆ ಬಹಳ ಒಳ್ಳೆಯದಾಗುತ್ತದೆಂದು ಹೇಳುತ್ತಿದ್ದರು. ಕುಡಿಯದೇ ಇರುವವರು ಸ್ವಲ್ಪ ತೆಗೆದುಕೊಳ್ಳಿ, ಆಮೇಲೆ ಹೆಚ್ಚಾಗಿ ಕುಡಿಯಬಹುದು ಎಂದು ಹೇಳುತ್ತಿದ್ದರು. ಆದ್ದರಿಂದ ನೀವು ಯಂಗ್ ಫ್ರೆಂಡ್ಸ್ ಕಮಿಟಿಗಳನ್ನು ಮಾಡಬೇಕೆಂದು ಈ ರೀತಿ ಮಾಡಿದ್ದೀರೆಂದು ನನಗೆ ಕಾಣುತ್ತದೆ. ಇದು ಖಂಡಿತ ವಾಗಿ ಸಮರ್ಪಕವಾಗಿಲ್ಲ. ಗಾಂಧೀಜಿ ತತ್ವಗಳನ್ನೇ ಅನುಸರಿಸುತ್ತಿದ್ದೇವೆಂದು ಹೇಳುವವರು ಸ್ವಾತಂತ್ರವನ್ನು ಸಂಪಾದನೆಮಾಡಿದಂಥ ಕಾಲದಲ್ಲಿ ಸರ್ವವಿಧವಾಗಿ ಪ್ರಯತ್ನಮಾಡಿ ಈ ಪಾನ ನಿರೋಧವನ್ನು ಏನಾದರೂ ಮಾಡಿ ಜಾರಿಗೆ ತರುತ್ತೇವೆ, ಇದು ಒಂದು ಕೆಟ್ಟ ಜಾಡ್ಯ, ಇದರಿಂದ ದೇಶಕ್ಕೆ ಕೇಡಾಗುತ್ತದೆ, ಇದರಿಂದ ಬಡ ಜನರ ಹಣ ಅನ್ಯಾಯವಾಗಿ ಹಾಳಾಗುತ್ತದೆಂದು ಹೇಳುತ್ತಿದ್ದವರು ಇವತ್ತಿನ ದಿವಸ ತಿನ್ನುವುದಕ್ಕೆ ಇಲ್ಲದೇ ಇರುವವರೂ ಕೂಡ ಕೇವಲ 2—3 ರೂಪಾಯಿಗಳಿಗೆ ಕಡಿಮೆ ಇಲ್ಲದೆ ಕುಡಿಯುವುದಕ್ಕೆ ಖರ್ಚುಮಾಡುತ್ತಿದ್ದಾರೆಂಬ ಸ್ಥಿತಿಗೆ ಈ ದೇಶವನ್ನು ತಂದಿಟ್ಟಿದ್ದಾರೆ. ನಾನು ಸಾಧಾರಣವಾಗಿ ಹೇಳುವುದಾದರೆ, ಇವತ್ತಿನ ದಿವಸ ಕೂಲಿಮಾಡುವ ಮನುಷ್ಯ ಸ್ವಲ್ಪಮಟ್ಟಿಗೆ ಬಿಡುತ್ತಾ ಬಂದಿದ್ದರೂ ಇತರರು ದೊಡ್ಡ ದೊಡ್ಡ ಸೀಸೆಗಳನ್ನು ಕುಡಿಯಿರಿ ಎಂದು ರೈಸನ್ಸ್‌ಗಳನ್ನು ಕೊಡುತ್ತಿದ್ದಾರೆ. ಬಡ ಜನಗಳು ಕಷ್ಟಪಟ್ಟು ಸಂಪಾದಿಸಿದಂಥ ಹಣದಲ್ಲಿ ಅದಕ್ಕಾಗಿ ದಿನಕ್ಕೆ 3—4 ರೂಪಾಯಿಗಳನ್ನು ಖರ್ಚುಮಾಡಬೇಕೆಂದರೆ ಇದೇನು ಅನ್ಯಾಯ? ಇಲ್ಲಿ ಅನೇಕರು ಹಳ್ಳಿಗಳಿಂದ ಬಂದಿರತಕ್ಕವರು. ಹಳ್ಳಿಯ ಪರಿಸ್ಥಿತಿ ಏನೆಂಬುದು ಚೆನ್ನಾಗಿ ಗೊತ್ತಿದೆ. ಅಲ್ಲಿರತಕ್ಕ ಹರಿಜನರು ಸರ್ಕಾರದವರನ್ನು ಶಪಿಸುತ್ತಾರೆಂದು ಹೇಳುತ್ತಾರೆ. ನಾನು ಆ ರೀತಿ ಹೇಳುವುದಿಲ್ಲ. ಆ ರೀತಿ ಶಪಿಸುವವರು ಅವರು ಅಲ್ಲ. ಇವತ್ತಿನ ದಿವಸ ಉತ್ತಮರು ಎಂಬುದಾಗಿ ಯಾರು ಹೇಳುತ್ತಿದ್ದಾರೋ ಅಂತಹವರೇ ಜಾಸ್ತಿ ಕುಡಿಯುವವರಾಗಿದ್ದಾರೆ. ಹರಿಜನರು ಇತ್ತೀಚೆಗೆ ಅವನ್ನು ಬಿಡುತ್ತಾ ಬಂದರು. ಇವತ್ತಿನ ದಿವಸ ಅವರು ಮಾನ್ಯ ಶ್ರೀ ರಾಜಗೋಪಾಲಾಚಾರಿಯವರನ್ನು ಪೂಜೆ ಮಾಡಿದರು, ಏತಕ್ಕೆಂದರೆ ಅವರು ತಮ್ಮ ಮಕ್ಕಳನ್ನು ಚೆನ್ನಾಗಿ ತಿನ್ನುವುದಕ್ಕೆ ಅವಕಾಶಮಾಡಿಕೊಟ್ಟರಲ್ಲಾ ಎಂಬುದಾಗಿ ಇವತ್ತು ಹೇಳುತ್ತಿದ್ದಾರೆ. ಅಲ್ಲಿ ಪರಿಸ್ಥಿತಿ ಅದುದು ಹಣದ ಆಶೆಗೋಸ್ಕರ ಅಲ್ಲ. ಅಭಿವೃದ್ಧಿ ಕೆಲಸಕಾರ್ಯಗಳು ಆಗಬೇಕೆಂಬುದು ಮುಖ್ಯ. ನಮ್ಮ ದೇಶದಲ್ಲಿ ಅದಕ್ಕಾಗಿ ಬೇಕಾದಷ್ಟು ಹಣ ಬೇಕು. ಅದನ್ನು ಹೇಗೆ ರೂಢಿಸುವುದು ಎಂಬುದು ಮುಖ್ಯ. ನಮ್ಮ ಅಭಿವೃದ್ಧಿ ಕೆಲಸಕಾರ್ಯಗಳು ಬೇಕಾದರೆ ನಿಧಾನವಾಗಲಿ. ಆದರೆ ಅನ್ಯಾಯವಾಗಿ ಬಡಜನರನ್ನು ಶೋಷಣೆಮಾಡುವ ಕಾರ್ಯ ನಡಿಯಲ್ಲ. ಆದರೆ ಈ ಪಾನನಿರೋಧವನ್ನು ನಡಿಲಗೊಳಿಸುವುದರಲ್ಲಿ ಸರ್ಕಾರ ಈಗ ಮಾಡಿರುವ ಕಾರ್ಯ ಸಮರ್ಪಕವಾಗಿಲ್ಲ. ಅದರ ಜೊತೆಗೆ ಕಮಿಟಿಯನ್ನು ಬೇರೆ ಇವತ್ತಿನದಿವಸ ಮಾಡುತ್ತಿದ್ದಾರೆ. ಈಗ ಸರ್ಕಾರದಲ್ಲಿರುವವರ ಹೈಕಿ ಅನೇಕರು ಇವತ್ತಿನ ದಿವಸ ಸ್ವಾತಂತ್ರ್ಯ ಕಾಲದಲ್ಲಿ ಹೋರಾಡಿದ್ದಾರೆ. ಆದ್ದರಿಂದ ಅವರೆಲ್ಲರೂ ಸೇರಿ ಏನಾದರೂ ಮಾಡಿ ಈ ಕೆಟ್ಟ ಚಾಳಿಯನ್ನು ಹೋಗಲಾಡಿಸಬೇಕೆಂದು ಹೇಳುತ್ತೇನೆ. ಅನೇಕ ಕಡೆಗಳಲ್ಲಿ

ಅಂಗಡಿಗಳ ಮುಂದೆ ಏಕೆಟಿಂಗ್ ಮಾಡಿ ಹೆಂಡವನ್ನು ಮಾರಕೂಡದೆಂದು ಬೇಕಾದಷ್ಟು ಕಷ್ಟಕಟ್ಟು ಪಾನ ನಿರೋಧವನ್ನು ಯಶಸ್ವಿಗೊಳಿಸಿದ್ದಾರೆ. ಆ ರೀತಿಯಾಗಿ ಇಲ್ಲಿ ಏಕೆ ಮಾಡಬಾರದು ಎಂಬುದಾಗಿ ನಾನು ಕೇಳುತ್ತೇನೆ. ನಮ್ಮ ನಾಯಕರು, ನಮ್ಮ ದೇಶದಲ್ಲಿರತಕ್ಕ ಕೆಲವು ಮುಖಂಡರು, ಎಲ್ಲರೂ ಸೇರಿ ಈ ಕಾರ್ಯವನ್ನು ಮಾಡಬೇಕು. ಈ ದೇಶದಲ್ಲಿ ಇಂತಹ ಒಂದು ಕೆಟ್ಟ ಚಾಳಿ ಇರುವಂತೆ ಮಾಡುವುದು ಖಂಡಿತವಾಗಿ ಸರಿಯಲ್ಲ, ಯೋಗ್ಯವಲ್ಲವೆಂದು ನಾನು ಹೇಳುತ್ತೇನೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಪ್ರಧಾನ ಮಂತ್ರಿಗಳು ಪ್ರೊಹಿಬಿಷನ್ ಕಮಿಟಿ ಚೇರ್‌ಮನ್. ಅವರೇ ಇದನ್ನು ಮುರು ಮಾಡಬಹುದು.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಮದ್ರಾಸಿನಲ್ಲಿ ಇನ್ನೂ ಕೆಲವು ಕಡೆಗಳಲ್ಲಿ ಪ್ರೊಹಿಬಿಷನ್ ಇದೆ. ಅದನ್ನು ದಾಟಿಕೊಂಡು ಹೋದರೆ, ಇಂತಹುಗಳಿಗೆ ಸ್ವಲ್ಪಮಟ್ಟಿಗೆ ತೊಂದರೆ ಇದೆ.

ಶ್ರೀ ವಿ. ವೆಂಕಟಪ್ಪ.—ಇಲ್ಲಿ ಬಡ ಜನರು ಕುಡಿಯುವುದು ಕಮ್ಮಿ ಇದ್ದರೂ ಅಂತಹವರಿಗೆ ಇದನ್ನು ಒದಗಿಸಿಕೊಟ್ಟು ಅವರೇ ಅನ್ಯಾಯಮಾಡಿದ್ದಾರೆಂದು ಹೇಳಿದರೆ ಅದೇನೂ ತಪ್ಪಲ್ಲ.

ಇನ್ನು ಮಾನ್ಯ ಶ್ರೀ ಸುಬ್ಬರಾಯರು ನಮ್ಮ ಆರ್ಕಾವತಿ ಪ್ರಾಜೆಕ್ಟ್ ಮತ್ತು ಮಂಚನಬೆಲೆ ಪ್ರಾಜೆಕ್ಟ್‌ಗಳ ವಿಷಯವಾಗಿ ಕೆಲವು ಮಾತುಗಳನ್ನ ಹೇಳಿದ್ದಾರೆ.

Mr. **DEPUTY CHAIRMAN.**—The Hon'ble Member may continue his speech tomorrow. The House will now rise and meet tomorrow at 2-15 P.M.

———

The House adjourned at Six of the Clock to meet again at Fifteen Minutes past Two of the Clock on Tuesday the 12th March 1968.

— —

WD 10632—GPB—600—3-8-1968